www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–10 ಅಕ್ಟೋಬರ್ 2015
Volume : IX Issue : 10 October 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಎರಡನೇ ಬರೋಣ
3. ಹೃದಯ
4. ಡಿಜಿಎಮ್ ಬೇತೇಲ್ ಅಂಕಣ
4. ಆರೋಗ್ಯ ಸ್ವರ
5. ಸ್ಥಳೀಯ ಮತ್ತು ವಿದೇಶ ಸುದ್ಧಿ
6. ಪ್ರಾರ್ಥನಾ ಮನವಿಗಳು
7. ರೆಕ್ಕಗಳ ಕೆಳಗೆ !
8. ಸಾಕ್ಷಿಯ ಸ್ವರ
9. ಮಹಿಳೆಯರ ಸ್ವರ
10. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ನಮ್ಮ ಕರ್ತನಾದ ಯೇಸುಕ್ರಿಸ್ತನ ಮಧುರವಾದ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ಆತ್ಮೀಯ ವಂದನೆಗಳು.

ಈ ದಿನಗಳಲ್ಲಿ ನಿಜವಾಗಿಯೂ ನಮಗೆ ಬಹಳ ಸಂತೋಷವಾಗುತ್ತಿದೆ. ಯಾಕಂದರೆ ಅನೇಕರ ಸಾಕ್ಷಿಯನ್ನು, ಹೇಳಿಕೆಯನ್ನು ಕೇಳಿ ನಾನು ದೇವರಿಗೆ ಸ್ತೋತ್ರ ಸಲ್ಲಿಸುತ್ತಿದ್ದೇನೆ. ನಮ್ಮ ದೇವರ ಸ್ವರದ ಮಾಸ ಪತ್ರಿಕೆಯ ಮೂಲಕ ಅನೇಕರಿಗೆ ಪ್ರಯೋಜ, ಪ್ರೋತ್ಸಾಹ ಹಾಗೂ ಉತ್ತೇಜನವಾಗುತ್ತಿರುವುದೇ ನಮಗೆ ಬಹಳ ಸಂತೋಷವನ್ನುಂಟು ಮಾಡಿದೆ.

ದೇವರ ವಾಕ್ಯದಲ್ಲಿ ನಾವು ನೋಡುತ್ತೇವೆ. ಒಬ್ಬರಿಗೊಬ್ಬರು ಪ್ರೋತ್ಸಾಹಿಸಿರಿ ಎಂದು. ಅನೇಕರ ಜೀವಿತದಲ್ಲಿ ತಮ್ಮ ಸರಿಯಾದ ಸಂದರ್ಭದಲ್ಲಿಯೇ ಈ ಮಾಸ ಪತ್ರಿಕೆಯು ಅವರ ಕೈಗೆ ಸಿಕ್ಕಿ ಅವರನ್ನು ಪ್ರೋತ್ಸಾಹ, ಉತ್ತೇಜನ ಮಾತ್ರವಲ್ಲ, ಒಂದು ಚೈತನ್ಯ ಕೊಟ್ಟಿರುವುದನ್ನು ನಾವು ಕೇಳಿ ದೇವರಲ್ಲಿ ಆನಂದಿಸುತ್ತಿದ್ದೇವೆ. ಇದು ಇನ್ನು ಅನೇಕರ ಕೈಗೆ ಸಿಗುವುದಕ್ಕಾಗಿ, ಅವರ ಜೀವಿತದಲ್ಲಿ ಒಂದು ಬಿಡುಗಡೆ ಕಾಣುವ ಹಾಗೆ ನೀವೆಲ್ಲರೂ ಪ್ರಾರ್ಥಿಸಿರಿ ಹಾಗೂ ನಮ್ಮೊಂದಿಗೆ ಕೈ ಜೋಡಿಸಿ ಪ್ರೋತ್ಸಾಹಿಸಿರಿ.

ದೇವರ ವಾಕ್ಯದಲ್ಲಿ ನಾವು ಈ ರೀತಿ ನೋಡುತ್ತೇವೆ, ಆತನನ್ನೇ ದೃಷ್ಟಿಸಿದವರು ಪ್ರಕಾಶವನ್ನು ಹೊಂದುವರು; ಅವರ ಮುಖವು ಲಜ್ಜೆಯಿಂದ ಕೆಡುವುದೇ ಇಲ್ಲ (ಕೀರ್ತ. 34:5).

ಇಲ್ಲಿ ನಾವು ನೋಡುವುದು ಹಾಗೂ ಗಮನಿಸಬೇಕಾದ ಸಂಗತಿ ಏನೆಂದರೆ ಆತನನ್ನೇ ದೃಷ್ಟಿಸಿದವರು ಸತ್ಯವೇದದಲ್ಲಿ ಆದಿಕಾಂಡದಿಂದ ಹಿಡಿದು ಕೊನೆಯ ಪುಸ್ತಕವಾದ ಪ್ರಕಟಣೆಯವರೆಗೂ ಓದುವುದಾದರೆ ಆತನನ್ನು ನೋಡಿದವರು ಎಂದಿಗೂ ನಾಶವಾಗಲಿಲ್ಲ, ಹಾಳಾಗಲಿಲ್ಲ, ಆಶಾಭಂಗ ಹೊಂದಲಿಲ್ಲ; ಯಾಕಂದರೆ ನಮ್ಮ ದೇವರು ಉದ್ಧರಿಸುವಾತನು. ಆತನನ್ನು ನಂಬಿ ಯಾರೆಲ್ಲಾ ಆತನ ಹಿಂದೆ ಬರುತ್ತಾರೋ ಅವರನ್ನು ಕೈಬಿಡದೆ ಕಾಪಾಡುವಾತನು, ರಕ್ಷಿಸುವಾತನು ಮಾತ್ರವಲ್ಲ, ಪೋಷಿಸುವಾತನು ಆಗಿದ್ದಾನೆ.

ನನ್ನ ಪ್ರಿಯ ದೇವಜನರೇ, ನಿಮ್ಮ ಜೀವಿತದಲ್ಲಿ ನೀನು ನಂಬಿಕೆ, ನಿರೀಕ್ಷೆಯನ್ನು ಈ ದಿನಗಳಲ್ಲಿ ಕಳೆದುಕೊಂಡಿರುವುದಾದರೆ ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ ಏನಂದರೆ ಆತನನ್ನು ನೋಡುವ ಯಾರನ್ನು ನಾಶವಾಗಲು ಆತನು ಬಿಡುವ ದೇವರಲ್ಲ. ಆತನು ಜೀವಿಸುತ್ತಿರುವಾತನು ಮತ್ತು ನಮ್ಮನ್ನು ಜೀವಿಸುವಂತೆ ಮಾಡುವಾತನು. ಪ್ರಿಯರೇ, ನಿಮ್ಮ ಜೀವಿತದ ಸಮಸ್ಯೆಯನ್ನೇ ನೀನು ದೊಡ್ಡದೆಂದು ಎಣಿಸದೆ ನಿನ್ನನ್ನು ಕರೆದಾತನನ್ನು, ದೊಡ್ಡವನು, ಸರ್ವಶಕ್ತನು ಎಂದು ಆತನನ್ನೇ ನೋಡಿ ದೃಷ್ಟಿಸಿ ಮುನ್ನಡೆಯುವುದಾದರೆ ಆತನು ನಿನ್ನನ್ನು ಉದ್ಧರಿಸಲು ಶಕ್ತನಾಗಿದ್ದಾನೆ.

ದೇವರು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

2) "ಕಂದಾ ಆಲಿಸಿ ನನ್ನ ಮಾತುಗಳನ್ನು ಕೇಳು ಕೇಳಿದರೆ ನಿನ್ನ ಜೀವಮಾನದ ವರುಷಗಳು ಹೆಚ್ಚುವವು" (ಜ್ಞಾನೋ. 4:10). ಉಪದೇಶದಿಂದ ನಾವು ಹೇಗೆ ಜೀವಿಸಬೇಕು, ಯಾವ ರೀತಿಯಲ್ಲಿ ನಡೆಯಬೇಕು ಎಂಬುದಾಗಿ ತಿಳಿದುಕೊಳ್ಳುತ್ತೇವೆ. ಉದಾ: ಕೀರ್ತ. 34:11–14 ಮಕ್ಕಳಿರಾ ಬನ್ನಿರಿ ನನ್ನ ಮಾತನ್ನು ಕೇಳಿರಿ ನಾನು ಯೆಹೋವನ ಭಯವನ್ನು ನಿಮಗೆ ಕಲಿಸುವೆನು. ದೀರ್ಘಾಯುಷ್ಯವು ಬೇಕೋ? ಹಾಗಾದರೆ ಕೆಟ್ಟದ್ದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ ವಂಚನೆಯ ಮಾತುಗಳಿಗೆ ಬಿಡದೆ ತುಟಿಗಳನ್ನು ಇಟ್ಟುಕೋ ಕೆಟ್ಟದ್ದನ್ನು ಬಿಟ್ಟು ಒಳ್ಳೇಯದನ್ನೇ ಮಾಡು ಸಮಾಧಾನ ಹಾರೈಸಿ ಅದಕ್ಕಾಗಿ ಪ್ರಯತ್ನಪಡು.

ಮೇಲಿನ ವಾಕ್ಯಗಳಲ್ಲಿ ಉಪದೇಶವು ನಮಗೆ ಕಲಿಸುವಂತದ್ದು

1) ನಾಲಿಗೆಯನ್ನು ನಿಯಂತ್ರಿಸುವ ಕುರಿತಾಗಿ

2) ಕೆಟ್ಟದ್ದನ್ನು ಬಿಟ್ಟು ಒಳ್ಳೇದನ್ನು ಮಾಡುವ ಕುರಿತಾಗಿ ಆಗಲೇ ನಮಗೆ ದೀರ್ಘಾಯುಷ್ಯವು ಕರ್ತನಿಂದ ಸಿಗುತ್ತದೆ. ಕೀರ್ತ. 90:10 ಹೇಳುತ್ತದೆ, ನಮ್ಮ ಆಯುಷ್ಕಾಲವು ಎಪ್ಪತ್ತು ವರುಷ; ಬಲ ಹೆಚ್ಚಿದರೆ ಎಂಭತ್ತು. ಕಷ್ಟಸಂಕಟಗಳೇ ಅದರ ಅಡಂಬರ ಅದು ಬೇಗನೆ ಗತಿಸಿಹೋಗುತ್ತದೆ; ನಾವು ಹಾರಿ ಹೋಗುತ್ತೇವೆ.

   ಲೋಕದಲ್ಲಿ ಮನುಷ್ಯನು ಕೇವಲ ಕೆಲವೇ ಕೆಲವು ವರುಷಗಳ ಕಾಲ ಜೀವಿಸುತ್ತಾನೆ ಆದರೆ ಅವನಿಗೆ ಸಂತೋಷ ಇಲ್ಲ, ಸಮಾಧಾನ ಇಲ್ಲ, ನೆಮ್ಮದಿ ಇಲ್ಲ, ಆರೋಗ್ಯ ಇಲ್ಲ, ಕುಟುಂಬ, ಮಕ್ಕಳಿಂದ ಕೈ ಬಿಡಲ್ಪಡುವ ಪರಿಸ್ಥಿತಿ ಇದರಿಂದ ಬೇಗನೆ ಮರಣ ಬಂದರೆ ಒಳ್ಳೇದು ಎಂಬುದಾಗಿ ಬಯಸುತ್ತಾನೆ. ಆದರೆ ದೇವರ ವಾಕ್ಯದ ವಾಗ್ದಾನವೇನು?

   ಕೀರ್ತ. 91:14–16 ಅವನು ನನ್ನಲ್ಲಿ ಅಸಕ್ತನಾಗಿರುವುದರಿಂದ ಅವನನ್ನು ರಕ್ಷಿಸುವೆನು ನನ್ನ ನಾಮವನ್ನು ಅರಿತವನಾಗಿರುವುದರಿಂದ ಅವನನ್ನು ಉದ್ಧರಿಸುವೆನು ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವೆನು. ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು ದೀರ್ಘಾಯುಷ್ಯವನ್ನು ಅನುಗ್ರಹಿಸಿ ಅವನನ್ನು ತೃಪ್ತಿಪಡಿಸುವೆನು. ನನ್ನ ವಿಶೇಷವಾದ ರಕ್ಷಣೆಯನ್ನು ತೋರಿಸುವೆನು. ಮೇಲಿನ ವಚನಗಳ (7) ಏಳು ವಿಧವಾದ ಆಶೀರ್ವಾದಗಳಿವೆ ಅದು ಕರ್ತನಲ್ಲಿ ಆಸಕ್ತಿಯುಳ್ಳವರಿಗೆ ಸಿಗುವಂತಹ ಆಶೀರ್ವಾದಗಳು ಕರ್ತನಲ್ಲಿ ಆಸಕ್ತಿ ಹೇಗೆ ಬರುತ್ತದೆ? ಉಪದೇಶದ ಮೂಲಕ ಕರ್ತನ ವಚನಗಳನ್ನು ಅನುಸರಿಸಿ ಆತನಿಗೆ ಭಯಪಟ್ಟು ಆತನಲ್ಲಿ ಆಸಕ್ತಿ ತೋರಿಸುವ ಪ್ರತಿಯೊಬ್ಬರಿಗೂ ಕರ್ತನು ದೀರ್ಘಾಯುಷ್ಯವನ್ನು ಅನುಗ್ರಹಿಸಿ ತೃಪ್ತಿಪಡಿಸುತ್ತಾನೆ.

3) "ಕಂದಾ, ನನ್ನ ಜ್ಞಾನೋಪದೇಶವನ್ನು ಆಲಿಸು; ನನ್ನ ವಿವೇಕ ಬೋಧೆಗೆ ಕಿವಿಗೊಡು. ಹೀಗಾದರೆ ನೀನು ಸ್ವಬುದ್ಧಿಯನ್ನು ಕೈಗೊಳ್ಳುವಿ, ನಿನ್ನ ತುಟಿಗಳು ತಿಳುವಳಿಕೆಯನ್ನು ಕಾಪಾಡುವವು" (ಜ್ಞಾನೋ. 5:1–2). ಉಪದೇಶದ ಮೂಲಕ ದೇವರು ನಮಗೆ ಸ್ವಬುದ್ಧಿ ಮತ್ತು ತುಟಿಗಳನ್ನು ಕಾಪಾಡುವ ಕೃಪೆಯನ್ನು ಅನುಗ್ರಹಿಸುತ್ತಾನೆ. ಉಪದೇಶದಿಂದ ಮೂರ್ಖತನದ ಮಾರ್ಗಗಳನ್ನು ನಾವು ತೊರೆಯಲು ಸಾಧ್ಯವಾಗುತ್ತದೆ. ಉಪದೇಶವು ನಮ್ಮನ್ನು ಕರ್ತನಾದ ಯೇಸುಕ್ರಿಸ್ತನ ಹಾಗೆ ಜೀವಿಸಲು ಕಲಿಸುತ್ತದೆ.

4) "ನಾನು ಜ್ಞಾನವರ್ಮಾಗವನ್ನು ಉಪದೇಶಿಸಿ ಧರ್ಮಮಾರ್ಗದಲ್ಲಿ ನಿನ್ನನ್ನು ನಡಿಸುವೆನು. ನೀನು ನಡೆಯುವಾಗ ನಿನ್ನ ಹೆಜ್ಜೆಗೆ ಇಕ್ಕಟ್ಟಾಗದು, ಓಡಿದರೆ, ಮುಗ್ಗರಿಸುವದಿಲ್ಲ" (ಜ್ಞಾನೋ. 4:11–12). ಉಪದೇಶದ 4ನೇ ಆಶೀರ್ವಾದ ನಾವು ದಾರಿ ತಪ್ಪುವುದಿಲ್ಲ. ಇಂದಿನ ದಿನಗಳಲ್ಲಿ ಅನೇಕ ಕ್ರೈಸ್ತ ವಿಶ್ವಾಸಿಗಳು ಪಾಪದಲ್ಲಿ, ಅಕ್ರಮದಲ್ಲಿ ಅಪರಾಧ ಕೃತ್ಯಗಳಲ್ಲಿ ಜೀವಿಸುವುದನ್ನು ಕಾಣುತ್ತೇವೆ ಇದಕ್ಕೆ ಒಂದು ಕಾರಣ ಉಪದೇಶದ ಕೊರತೆಯಾಗಿದೆ ಹೊಶೆ. 4:6 ರಲ್ಲಿ ಕರ್ತನು ಹೇಳುತ್ತಾನೆ, ನನ್ನ ಜನರು ಜ್ಞಾನಹೀನರಾಗಿ ನಾಶವಾಗುತ್ತಿದ್ದಾರೆ. "ಆಜ್ಞೆಯೇ ದೀಪ, ಉಪದೇಶವೇ ಬೆಳಕು, ಶಿಕ್ಷಣ ಪೂರ್ವಕವಾದ ಬೋಧನೆಯೇ ಜೀವದ ಮಾರ್ಗ" (ಜ್ಞಾನೋ. 6:23).

5) "ನೀನು ನಡೆಯುವಾಗ ಆ ಉಪದೇಶವು ನಿನ್ನನ್ನು ನಡಿಸುವದು, ಮಲಗಿಕೊಂಡಾಗ ಕಾಯುವದು, ಎಚ್ಚರಗೊಂಡಾಗ ನಿನ್ನೊಂದಿಗೆ ಮಾತಾಡುವದು" (ಜ್ಞಾನೋ. 6:22). ಉಪದೇಶ ನಡೆಸುತ್ತದೆ, ಕಾಯುತ್ತದೆ,

ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು
ಉಂಟುಮಾಡುವೆನು ಅಂದನು (ವಿಮೋ. 33:14).

ಮಾತನಾಡುತ್ತದೆ. ಪಾಪ ತುಂಬಿದ ಈ ಲೋಕದಲ್ಲಿ ಸತ್ಯದಲ್ಲಿ, ಪರಿಶುದ್ಧವಾಗಿ ಜೀವಿಸಬೇಕಾದರೆ ನಮಗೆ ಉಪದೇಶದ ಅವಶ್ಯಕತೆ ಇದೆ.

1) **ಉಪದೇಶ ನಡೆಸುತ್ತದೆ :–** ರಕ್ಷಣೆ ಹೊಂದಿದ ಒಬ್ಬ ಸಹೋದರನನ್ನು ಆತನ ಹಳೆಯ ಸ್ನೇಹಿತರು ಒಂದು ಔತಣ ಕೂಟಕ್ಕೆ ಆಹ್ವಾನಿಸಿದರು ಅವರಿಗೆ ಈತನನ್ನು ಹೇಗಾದರೂ ಕುಡಿಯುವಂತೆ ಮಾಡಬೇಕಾಗಿತ್ತು ಅದಕ್ಕಾಗಿ ಆತನನ್ನು ಒತ್ತಾಯ ಪಡಿಸಿದರು. ಆದರೆ ಆತನು ನಯವಾಗಿ ಮಧ್ಯಪಾನವನ್ನು ತಿರಸ್ಕರಿಸಿದನು. ಮಾತ್ರವಲ್ಲ ತನ್ನ ಸ್ನೇಹಿತರಿಗೂ ತಾನು ಕುಡಿಯುವುದನ್ನು ಬಿಟ್ಟಂತಹ ಸಾಕ್ಷಿಯನ್ನು ಹಂಚಿದನು. ನಮ್ಮ ಶರೀರವು ಪವಿತ್ರಾತ್ಮನ ಮಂದಿರವಾಗಿದೆ ಎಂದೂ ಆದ್ದಕಾರಣ ಅದನ್ನು ಶುದ್ಧವಾಗಿ ಇಡಬೇಕೆಂಬ ಸಾಕ್ಷಿಯನ್ನು ತನ್ನ ಸ್ನೇಹಿತರಿಗೆ ವಿವರಿಸಿದನು. ಅಂದು ಆತನ ಅನೇಕ ಸ್ನೇಹಿತರು ಕುಡುಕತನ ಬಿಟ್ಟದ್ದು ಮಾತ್ರವಲ್ಲದೆ ಕರ್ತನಾದ ಯೇಸುಕ್ರಿಸ್ತನನ್ನು ತಮ್ಮ ಜೀವಿತದ ರಕ್ಷಕನೂ ಒಡೆಯನಾಗಿ ಅಂಗೀಕರಿಸಿದರು.

2) **ಉಪದೇಶ ಕಾಯುತ್ತದೆ :–** ಒಂದು ಕ್ರೈಸ್ತ ವಿಶ್ವಾಸಿ ಸಭೆಯಲ್ಲಿ ರಕ್ಷಣೆ ಹೊಂದಿದ ಒಬ್ಬ ಯೌವನಸ್ಥ ಇದ್ದನು. ಅವನು ರಕ್ಷಣೆ ಹೊಂದಿದ್ದರೂ ಅವನ ಜೀವಿತ ಮಾರ್ಪಾಡಾಗಿರಲಿಲ್ಲ. ಕುಡುಕತನ, ಜಗಳ ಮಾಡುವುದು, ರೌಡಿಗಿರಿ, ಅನೇಕ ರಹಸ್ಯ ಪಾಪಗಳಲ್ಲಿ ಜೀವಿಸುತ್ತಿದ್ದನು. ಅವನೊಬ್ಬ ಆಟೋರಿಕ್ಷಾ ಡ್ರೈವರ್ ಆಗಿದ್ದ. ಒಂದು ದಿನ ಅವನ ರೀಕ್ಷಾದಲ್ಲಿ ಒಂದು ದಂಪತಿಗಳು ಹತ್ತಿ ಹೋಗಬೇಕಾದ ಸ್ಥಳವನ್ನು ತಿಳಿಸಿದರು. ಅವನು ಅನೇಕ ಕಡೆ ಅವರನ್ನು ಸುತ್ತಾಡಿಸಿ ಆ ಸ್ಥಳಕ್ಕೆ ತಂದ ಅದರ ನಂತರ ಮೀಟರ್‌ಗಿಂತ ಹೆಚ್ಚು ಹಣವನ್ನು ಅವರಿಗೆ ಕೇಳಿದ ದಂಪತಿಗಳು ಮರು ಮಾತನಾಡದೆ ಆತನು ಹೇಳಿದ ಹಣವನ್ನು ಕೊಡಲು ಮುಂದಾದರು 500 ರೂ ನೋಟನ್ನು ಕೊಟ್ಟಾಗ ಆಟೋರೀಕ್ಷಾದವನು ಗಡಿಬಿಡಿಯಲ್ಲಿ ಅವರಿಗೆ 1000 ರೂಪಾಯಿಗೆ ಚಿಲ್ಲರೆ ಕೊಟ್ಟ ಇದನ್ನು ಗಮನಿಸಿದ ದಂಪತಿಗಳು ಅವನಿಗೆ ನಾವು ನಿನಗೆ 500 ರೂಪಾಯಿ ಕೊಟ್ಟದ್ದು ನೀನು ನಮಗೆ 1000 ರೂಪಾಯಿಗೆ ಚಿಲ್ಲರೆ ಕೊಟ್ಟಿದ್ದೀಯಲ್ಲಾ ಎಂದು ಅವನ ಹಣ ಅವನಿಗೆ ಹಿಂತಿರುಗಿಸಿದರು. ಆಗ ರೀಕ್ಷಾದವನಿಗೆ ಪಶ್ಚಾತ್ತಾಪ ಆಗಿ ಅವರ ಬಳಿಯಲ್ಲಿ ದಯಮಾಡಿ ನನ್ನನ್ನು ಕ್ಷಮಿಸಿ ನಾನು ನಿಮಗೆ ಮೋಸ ಮಾಡಿದೆ, ಮೊದಲನೆಯದಾಗಿ ಅನೇಕ ಕಡೆ ನಿಮ್ಮನ್ನು ಸುತ್ತಾಡಿಸಿ ತಂದೆ, ಎರಡನೆದಾಗಿ ಮೀಟರ್‌ಗಿಂತ ಹೆಚ್ಚು ಹಣ ನಿಮ್ಮಲ್ಲಿ ಕೇಳಿದೆ ಅಂದನು ಆಗ ಆ ದಂಪತಿಗಳು ಈ ಸ್ಥಳವೆಲ್ಲಾ ನಮಗೆ ಪರಿಚಯ ಇದೆ ಮತ್ತು ಈ ಸ್ಥಳಕ್ಕೆ ನಾವು ಪ್ರಯಾಣ ಮಾಡಿದ ಹಣ ಕೂಡ ಎಷ್ಟಾಗುತ್ತೆ ಅಂತ ಗೊತ್ತಿದೆ ಆದರೆ ಇಂದು ನಾವು ಯೇಸುಕ್ರಿಸ್ತನ ಮಕ್ಕಳಾಗಿದ್ದೇವೆ ನೀನು ನಮಗೆ ಮೋಸ ಮಾಡಿದ್ದು ನಮಗೆ ಗೊತ್ತು ಆದರೆ ನಿನ್ನನ್ನು ಕರ್ತನಾದ ಯೇಸುಕ್ರಿಸ್ತನು ಬದಲಾಯಿಸಲು ನಾವು ಆಟೋದಲ್ಲಿ ಕುಳಿತಾಗ ಪ್ರಾರ್ಥಿಸುತ್ತಿದ್ದೇವು ನಾವು ಕೂಡ ಕರ್ತನಾದ ಯೇಸುವನ್ನು ಅಂಗೀಕರಿಸುವುದಕ್ಕೆ ಮುಂಚೆ ಅನೇಕರಿಗೆ ಮೋಸ ಮಾಡಿ ಜೀವಿಸಿದವರು ಇದರಿಂದ ನಮಗೆ ಅನೇಕರು ಮೋಸ ಮಾಡಿದರು. ಇದ್ದದ್ದನ್ನು ಎಲ್ಲಾ ಕಳಕೊಂಡಾಗ ಯೇಸುಕ್ರಿಸ್ತನು ನಮ್ಮನ್ನು ಹುಡುಕಿ ಬಂದು ರಕ್ಷಣೆ ಕೊಟ್ಟನು, ಕಳಕೊಂಡ ಸಂತೋಷ, ಸಮಾಧಾನ ಕೊಟ್ಟನು. ನಾವು ಚಿಕ್ಕ ವ್ಯಾಪಾರ ಆರಂಭಿಸಿದೆವು. ಕರ್ತನು ಅದನ್ನು ಆಶೀರ್ವಾದ ಮಾಡಿ ಇಂದು ನಮ್ಮನ್ನು ಹೆಚ್ಚಿಸಿದ್ದಾನೆ ಎಂಬುದಾಗಿ ಅವರು ಹೇಳಿದಾಗ ಆಟೋ ಡ್ರೈವರಿ ಕಣ್ಣೀರಿನಿಂದ ನಾನು ಕೂಡ ಒಬ್ಬ ಕ್ರೈಸ್ತ ವಿಶ್ವಾಸಿಯಾಗಿದ್ದೇನೆ. ಆದರೆ ನನ್ನಲ್ಲಿ ಇನ್ನು ಬದಲಾವಣೆಯಾಗಲಿಲ್ಲ, ಲೋಕದ ಜನರ ಪ್ರಕಾರವೇ ಜೀವನ ಮಾಡುತ್ತಿದ್ದೇನೆ ದಯವಿಟ್ಟು ನನ್ನನ್ನು ಕ್ಷಮಿಸಿ ಇನ್ನು ಮುಂದೆ ಒಳ್ಳೇಯ ಕ್ರೈಸ್ತ ವಿಶ್ವಾಸಿಯ ಹಾಗೆ ಜೀವಿಸುತ್ತೇನೆಂಬುದಾಗಿ ಹೇಳಿದನು. ಅಂದು ಆ ದಂಪತಿಗಳ ಸ್ವಲ್ಪ ಸಮಯದ ಉಪದೇಶವು ಪುನಃ ಪಾಪ ಮಾರ್ಗದಲ್ಲಿ ಹೋಗುವಂತಹ ಒಬ್ಬ ಕ್ರೈಸ್ತ ವಿಶ್ವಾಸಿಯಾದ ಆಟೋ ಡ್ರೈವರನನ್ನು ರಕ್ಷಿಸಿತು.

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ನನ್ನ ಸರ್ವೋತ್ತಮತ್ತವನ್ನು ನಿನ್ನೆದುರಾಗಿ ದಾಟಿಹೋಗುವಂತೆ ಮಾಡುವೆನು;
ಯೆಹೋವನ ನಾಮದ ಮಹತ್ವವನ್ನು ನಿನ್ನೆದುರಾಗಿ ಪ್ರಕಟಿಸುವೆನು (ವಿಮೋ. 33:19).

# ಎರಡನೇ ಬರೋಣ

ಸತ್ಯವೇದದಲ್ಲಿ ಪ್ರಾಮುಖ್ಯವಾಗಿ ಹೇಳಲ್ಪಟ್ಟಿರುವ ಸಂಗತಿ, ಮಾನವನು ಈ ಪ್ರಪಂಚದ ಜೀವಿತವನ್ನು ಅಂತ್ಯಗೊಳಿಸಿದ ತರುವಾಯ ಅವನು ಅನುಭವಿಸಲಿರುವ ಸಂತೋಷವೂ, ದು:ಖಗಳೂ ಎಂಬವುಗಳೇ.

ಆತ್ಮೀಕ ಮನುಷ್ಯನು ಇಹಲೋಕದ ಜೀವಿತವನ್ನು ಮುಗಿಸಿದ ನಂತರ ಸಂತೋಷವನ್ನೂ, ಲೌಕೀಕ ಮನುಷ್ಯನು, ಭೂಮಿಯನ್ನು ತೊರೆದ ನಂತರ ದು:ಖ, ಯಾತನೆಯನ್ನೂ ಅನುಭವಿಸುವನು. ಆದರೆ ನಿಜ ಕ್ರೈಸ್ತರ ಒಂದು ಮುಖ್ಯವಾದ ನಿರೀಕ್ಷೆ "ಯೇಸುಕ್ರಿಸ್ತನ ಎರಡನೇ ಬರೋಣ" ಮೊದಲನೇ ಶತಮಾನದಲ್ಲಿದ್ದ ಭಕ್ತರು, ತಾವು ಈ ಲೋಕದಲ್ಲಿರುವಾಗಲೇ ಯೇಸುಕ್ರಿಸ್ತನ ಎರಡನೇ ಬರೋಣವೂ, ಭಕ್ತರ ಆನಂದೋತ್ಸವವೂ ಇರುವದೆಂದು ನಿರೀಕ್ಷಿಸಿದ್ದರು (1ಥೆಸ. 4:15). ಆದರೆ ಕಾಲವು ಪೂರ್ಣಗೊಳ್ಳದ್ದರಿಂದ ಆತನ ಬರೋಣವು ಸಾವಕಾಶ ವಾಯಿತು. ಮಾತ್ರವಲ್ಲದೆ ಸಭೆಯು "ಪೂರ್ಣಪಡುವಿಕೆ" ಎಂಬ ವಿಷಯದಲ್ಲಿ ಇಂದು ಇರುವ ಸಭೆಗಳಲ್ಲಿ ಅನೇಕ ಕೊರತೆಗಳಿವೆ. ಆದ್ದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವ ಪ್ರಕಾರ ನೀವು ದೋಷವಿಲ್ಲದವರಾಗಿರ್ರಿ ಎಂಬುದೇ ಯೇಸುಕ್ರಿಸ್ತನು ನೀಡಿದ ಸಂದೇಶ ಮುಖ್ಯ ವಿಷಯ.

ಸಭೆಯು ಪ್ರಾರಂಭವನ್ನು ನಾವು ಪರಿಶೀಲನೆ ಮಾಡುವದಾದರೆ, ಕರ್ತನ ದೃಷ್ಟಿಯಲ್ಲಿ ಜಗದುತ್ಪತ್ತಿಗೆ ಮೊದಲೇ ಇದ್ದದ್ದು (ಎಫೆ. 1:4–5). ಯೇಸುಕ್ರಿಸ್ತನು ಕ್ರೂಜೆಯನ್ನು ಸಂಧಿಸುವ ಮೊದಲು ಸಭೆಯನ್ನು ಸ್ಥಾಪಿಸುವ ಉದ್ದೇಶವನ್ನು ಶಿಷ್ಯರಿಗೆ ಪ್ರಕಟಿಸಿದನು (ಮತ್ತಾ. 16:18).

**ಸಭೆಯ ಕಾಲ** :– ಪಂಚಾಶತ್ತಮದಿಂದ ಪ್ರಾರಂಭಿಸಿ ಭಕ್ತರು ಎತ್ತಲ್ಪಡುವ ಕಾಲದವರೆಗೆ; ಸಭೆಯ ಕಾಲವಾದ್ದರಿಂದ ಇದರ ಮಧ್ಯದಲ್ಲಿ ರಕ್ಷಿಸಲ್ಪಡುವವರು ಮಾತ್ರವೇ ಸಭೆಗೆ ಸೇರಿದವರು (ಅ.ಕೃ. 2:47). ಆದ್ದರಿಂದ ಹಳೆಯ ಒಡಂಬಡಿಕೆಯ ದೇವಭಕ್ತರು ಸಭೆಯನ್ನು ಸೇರಿದವರಲ್ಲ, ಆದಾಗ್ಯೂ ಅವರಿಗೂ ಸಭೆಗೂ ನಿಕಟವಾದ ಸಂಬಂಧವುಂಟು. ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ವಿಶೇಷವಾದ, ಶ್ರೇಷ್ಠವಾದ ಭಾಗ್ಯವನ್ನು ನಮಗೋಸ್ಕರ ಏರ್ಪಡಿಸಿದನು (ಇಬ್ರಿ. 11:40).

ಪ್ರಕ. 19:9ರಲ್ಲಿ ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರಸಿಕೊಂಡವರು ಧನ್ಯರು, ಎಂದು ಬರೆಯಲಾಗಿದೆ. ಒಂದು ವಿವಾಹವೆಂದರೆ ಮದಲಿಂಗನು, ಮದಲಗಿತ್ತಿ ಮಾತ್ರವಲ್ಲ, ಮದಲಿಂಗನ ಸ್ನೇಹಿತರು, ಮದಲಗಿತ್ತಿಯ ಸ್ನೇಹಿತೆಯರು, ಕರೆಯಲ್ಪಟ್ಟವರು ಇರುವರು. ಯೋಹಾ. 3:29ರಲ್ಲಿ ಸ್ನಾನಿಕನಾದ ಯೋಹಾನನು ತನ್ನನ್ನು ಮದಲಿಂಗನ ಗಳೆಯ ಎನ್ನುತ್ತಾನೆ. ಆತನನ್ನು ಹಳೆಯ ಒಡಂಬಡಿಕೆಯ ವಿಶ್ವಾಸಿಗಳ ಪ್ರತಿನಿಧಿಯನ್ನಾಗಿಟ್ಟುಕೊಂಡರೆ, ಹಳೆಯ ಒಡಂಬಡಿಕೆಯ ಭಕ್ತರನ್ನು ಮದಲಿಂಗನ ಗೆಳೆಯರು ಎಂದು ನಾವು ಕರೆಯಬಹುದು. ಕ್ರಿಸ್ತೇಸುವಿನ ರಹಸ್ಯ ಬರೋಣದಲ್ಲಿ ಕ್ರಿಸ್ತನಲ್ಲಿ ಸತ್ತವರು ಮೊದಲು ಎದ್ದು ಬರುವರು (1 ಥೆಸ. 4:16) ಸಭೆಯೊಂದಿಗೆ ಹಳೆಯ ಒಡಂಬಡಿಕೆಯ ಭಕ್ತರು ಎದ್ದೇಳುವರು ಎಂಬದರಲ್ಲಿ ಸಂಶಯವಿಲ್ಲ. ಯಜ್ಞದ ಕುರಿಮರಿಯಾದಾತನ ವಿವಾಹಕ್ಕೆ ಆತನ ರಕ್ತದಿಂದ ವಿಮೋಚಿಸಲ್ಪಟ್ಟ ಭಕ್ತರು, ಅಂದರೆ ಕರ್ತನಿಂದ ನಿತ್ಯ ವಿವಾಹಕ್ಕೆಂದು ನೇಮಿಸಲ್ಪಟ್ಟವರು ಮಾತ್ರವೇ ಪಾಲುಗೊಳ್ಳುವರು. ಅದರೊಂದಿಗೆ ಹಳೆಯ ಒಡಂಬಡಿಕೆಯ ಭಕ್ತರಾದ ಗೆಳೆಯರೂ ಗೆಳತಿಯರೂ ಇರುವರು. ಈ ಮಹಿಮೆಯಾದ ವಿವಾಹಮಹೋತ್ಸವವನ್ನು ದೇವದೂತರೆಲ್ಲರೂ ನೋಡಿ ಆಶ್ಚರ್ಯಪಡುವರು. ಕರ್ತನು ತನ್ನ ಸಭೆಗಾಗಿಯೂ ಪ್ರಪಂಚಕ್ಕಾಗಿಯೂ ಉದ್ದೇಶಿಸಿರುವ ರಕ್ಷಣಾ ಯೋಜನೆಯು ದೃಢವಾದದ್ದಾಗಿ, ನಿರೀಕ್ಷೆಯುಳ್ಳ ಒಂದು ಗುರಿಯೆಡೆಗೆ ಸಾಗುತ್ತಿದೆ. ಆಗ ಕ್ರಿಸ್ತನಲ್ಲಿ ಸತ್ತವರು ಎದ್ದು ಬರುವರು. ಆ ಮೇಲೆ ಜೀವದಿಂದರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅದರ ಸಂಗಡಲೇ ಫಕ್ಕನೆ ಒಯ್ಯಲ್ಪಡುವೆವು (1 ಕೊರಿ. 15:51–52, 1 ಥೆಸ. 4:13–14, 16:17).

2 ಅರಸು. 2:11 ರಲ್ಲಿ ಮರಣವನ್ನು ಕಾಣದೆ ಎತ್ತಿಕೊಳ್ಳಲ್ಪಟ್ಟ ಎಲೀಯನನ್ನು ಆದಿ. 5:24ರಲ್ಲಿ ಕಾಣದೆಹೋದಂಥ ಹನೋಕನನ್ನು ಸತ್ಯವೇದವು ತೋರಿಸುತ್ತದೆ. ಲೂಕ. 9:28–31ರ ವರೆಗಿನ ವಾಕ್ಯಗಳಲ್ಲಿ ಯೇಸುಕ್ರಿಸ್ತನು ಮಹಿಮೆಯಲ್ಲಿ ಬರುವಾಗ ಆ ಮಹಿಮೆಯೂ, ಅದರಲ್ಲಿ ಭಾಗವಹಿಸುವವರ ಮಹಿಮೆಯೂ ಎಷ್ಟು ಅಮೋಘವಾಗಿರುವದೆಂಬದನ್ನು ಆ ದರ್ಶನ ತೋರಿಸುತ್ತದೆ.

ಕೃಪೆಯೂ ಸತ್ಯವೂ ಒಂದನ್ನೊಂದು ಕೂಡಿರುವವು;
ನೀತಿಯೂ ಸಮಾಧಾನವೂ ಮುದ್ದಿಟ್ಟುಕೊಳ್ಳುವವು (ಕೀರ್ತ. 85:10).

ರೂಪಾಂತರ ಬೆಟ್ಟದಲ್ಲಿ ಕ್ರಿಸ್ತನಲ್ಲಿ ಮರೆಯಾಗಿರುವ ದೈವಿಕ ಮಹಿಮೆಯು ಆತನ ಮಾನುಷೀಕತ್ವವನ್ನು ಮೀರಿ ಅದ್ಭುತವಾಗಿ ಪ್ರಕಟವಾಗಿ ಪ್ರಕಾಶಿಸುವದನ್ನೂ, ಮೋಶೆಯೂ ಎಲೀಯನೂ ಒಂದೇ ವಿಧವಾದ ಮಹಿಮೆಯುಳ್ಳವರಾಗಿರುವದನ್ನೂ, ಶಿಷ್ಯರೂ ಸಹ ನೋಡಿದರು. ಮೋಶೆಯು, ಮರಣವನ್ನು ಅನುಭವಿಸಿದ ಭಕ್ತರಿಗೂ ಎಲೀಯನು ಮರಣವನ್ನು ಕಾಣದ ಭಕ್ತರಿಗೂ ಗುರುತಾಗಿದ್ದಾರೆ. ಮಾತ್ರವಲ್ಲದೆ, ಮೋಶೆ ವಿವಾಹವಾದ ಭಕ್ತರಿಗೂ ಎಲೀಯನು ವಿವಾಹವಾಗುದಂಥ ಭಕ್ತರೆಲ್ಲರಿಗೂ ಗುರುತು. ಸತ್ತರೂ, ಬದುಕಿದ್ದರೂ ವಿವಾಹವಾಗಿದ್ದರೂ ವಿವಾಹವಾಗಿಲ್ಲದಿದ್ದರೂ ಎಲ್ಲರೂ ಮಹಿಮೆಯಲ್ಲಿ ಸೇರುವರು.

**ಕರ್ತನ ಬರೋಣವು ಯಾವಾಗ?**

ಕೆಲವರು, ಕರ್ತನ ಬರೋಣವು ಉಪದ್ರವ ಕಾಲಕ್ಕೆ ಮೊದಲು ಇರುವದು ಎಂದೂ, ಕೆಲವರು ಅನಂತರವೆಂದೂ ಹೇಳುವರು. ಕರ್ತನಾದ ಯೇಸುಕ್ರಿಸ್ತನ ರಹಸ್ಯಬರೋಣವೂ, ಬಹಿರಂಗವಾದ ಬರೋಣವು ಇವೆರಡೂ ಒಂದೇ ಎಂಬದಾಗಿ ನೆನಸುವದರಿಂದಲೂ, ಅಥವಾ ಈ ವ್ಯತ್ಯಾಸ ತಿಳಿಯದಿದ್ದರಿಂದಲೂ ಮೇಲಿನ ಗೊಂದಲ ಉಂಟಾಗುತ್ತದೆ. ಆದರೆ ರಹಸ್ಯ ಬರೋಣವು ಯೇಸುಕ್ರಿಸ್ತನ ಎರಡನೇ ಬರೋಣವಲ್ಲ. ಎರಡನೇ ಬರೋಣವು ನಮ್ಮ ಕಣ್ಣುಗಳು ಕಾಣುವಂಥದ್ದು. ದೈಹಿಕವಾಗಿ ಯೇಸುಕ್ರಿಸ್ತನು ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಬರುವಂಥದ್ದೇ ಆಗಿದೆ. ಆತನು ಯಾವ ಸ್ಥಳದಲ್ಲಿ ಏರಿಹೋಗಿದ್ದಾನೋ, ಅದೇ ಸ್ಥಳದಲ್ಲಿ ಬಂದು ಇಳಿಯುವನು (ಅ.ಕೃ. 1:10–12, ಜೆಕ. 14:4). ಇದರಲ್ಲಿ ಯೇಸುಕ್ರಿಸ್ತನು ಇಸ್ರಾಯೇಲ್ಯರಿಗೂ, ಭೂಲೋಕದ ಸಕಲ ಜನಾಂಗಗಳವರಿಗೂ ತನ್ನ ಮಹಿಮೆಯನ್ನು ಪ್ರಕಟಪಡಿಸುವನು. ಆದರೆ ರಹಸ್ಯ ಬರೋಣದಲ್ಲಿ ಕ್ರಿಸ್ತನು ತನ್ನ ಭಕ್ತರನ್ನು ಪವಿತ್ರರಾದವರನ್ನು ಮಾತ್ರ ಸೇರಿಸಿಕೊಳ್ಳುದಕ್ಕಾಗಿ ಮೇಘದಲ್ಲಿ ಬರುವನು. ಈ ಸಂದರ್ಭದಲ್ಲಿ ಆತನು ಭೂಮಿಗೆ ಬರುವದಿಲ್ಲ, ಈ ಎರಡು ಸಂಭವಗಳಿಗೂ ಮಧ್ಯೆ ಒಂದು ಕಾಲದ ಅಂತರ ಉಂಟು. ಆ ಕಾಲದಲ್ಲಿ ಕ್ರಿಸ್ತನೊಂದಿಗೆ ಎತ್ತಲ್ಪಟ್ಟ ಸಭೆಯ ನ್ಯಾಯತೀರ್ಪು, ಕುರಿಮರಿಯಾದಾತನ ವಿವಾಹದ ಔತಣವೂ ನಡೆಯುವದು. (2 ಕೊರಿ. 5:10, ಪ್ರಕ. 19:7). ಆದರೆ ಅದೇ ಸಮಯದಲ್ಲಿ ಭೂಮಿಯಲ್ಲಿ ಕ್ರಿಸ್ತವಿರೋಧಿಯ ಧೋರೆತನವೂ, ಮಹಾಉಪದ್ರವವೂ ನಡೆಯುವದು (1 ಥೆಸ. 3:13, ಯೂದ. 1:15). ಈ ವಾಕ್ಯದಲ್ಲಿ ಕರ್ತನು ತನ್ನ ಎರಡನೇ ಬರೋಣದಲ್ಲಿ ಲಕ್ಷಾಂತರ ಪರಿಶುದ್ಧ ದೂತರೊಂದಿಗೆ ಬರುವನೆಂದು ಹೇಳಿದೆ. ಮೊದಲನೆದಾಗಿ ಆತನು ಭಕ್ತರೆಲ್ಲರನ್ನೂ ಒಂದಾಗಿ ಕೂಡಿಸುವದು ಬಹಳ ಅವಶ್ಯ. ಆದ್ದರಿಂದ ರಹಸ್ಯ ಬರೋಣವೂ ಮಹಾಉಪದ್ರವಕ್ಕೆ ಮೊದಲು ನಡೆಯುವದು ಎಂಬದು ನಿಜವಾದದು.

ಈ ಬರೋಣಕ್ಕೆ ಮೊದಲು ಅನೇಕ ಗುರುತುಗಳು ಸಂಭವಿಸುತ್ತವೆ ಎಂದು ನಾವು ಸತ್ಯವೇದದಲ್ಲಿ ನೋಡುತ್ತೇವೆ. ಈ ಗುರುತುಗಳು ನೆರವೇರುವಾಗ ಯೇಸುಕ್ರಿಸ್ತನು ಬರುತ್ತಾನೆಂಬದು ನಿಜ. ನಾವು ಈಗ ಕೃಪಾಯುಗದಲ್ಲಿದ್ದೇವೆ. ಈ ಯುಗದಲ್ಲಿ ಕರ್ತನ ಬರೋಣವು ನೆರವೇರಬೇಕು.

ಸತ್ಯವೇದದಲ್ಲಿ ಕಾಲಗಳನ್ನು 7 ಯುಗಗಳೆಂದು ವಿಭಾಗಿಸಬಹುದು.

**1. ಪಾಪವಿಲ್ಲದ ಯುಗ:–** ಪಾಪವನ್ನು ತಿಳಿಯದಿದ್ದ ಕಾಲ. ಮಾನವನು ಸೃಷ್ಟಿಯಾದಂದಿನಿಂದ ಆದಾಮ ಹವ್ವಳ ಬೀಳುವಿಕೆಯವರೆಗಿನ ಕಾಲವು ಪಾಪ ತಿಳಿಯದ ಕಾಲ, ಅಥವಾ ದೋಷವಿಲ್ಲದ ಯುಗವೆನ್ನಬಹುದು. ಈ ಕಾಲದಲ್ಲಿದ್ದ ಮಾನವನಿಗೆ ಪಾಪವೆಂದರೆ ಏನೆಂದು ಗೊತ್ತಿಲ್ಲ. ಅದನ್ನು ಅವನು ಮಾಡಿದ್ದೂ ಇಲ್ಲ.

ಕರ್ತನಿಂದ ಸೃಷ್ಟಿಸಲ್ಪಟ್ಟಂಥ ಆದಿ ತಂದೆತಾಯಿಗಳು ಏದೇನ್ ತೋಟದಲ್ಲಿ ಇದ್ದರು. ಆದರೆ ಎಷ್ಟು ಕಾಲ ಅವರು ಪಾಪ ಮಾಡದೆ ಇದ್ದರು ಎಂದು ಹೇಳಲು ಬರುವದಿಲ್ಲ. ಅದು ಸ್ವಲ್ಪಕಾಲವಾಗಿರಬಹುದೆಂದು ಊಹಿಸಲಾಗಿದೆ. ಕರ್ತನು ಆ ಪವಿತ್ರವಾದ ಸ್ಥಿತಿಯಲ್ಲಿ ಬಹು ಸಂತಾನವುಳ್ಳವರಾಗಿ ಹೆಚ್ಚಿರಿ, ಭೂಮಿಯಲ್ಲಿ ತುಂಬಿಕೊಳ್ಳಿರಿ ಎಂದು ಅವರನ್ನು ಆಶೀರ್ವದಿಸಿದನು, ಅದೇ ರೀತಿ ಹೆಚ್ಚುವ ಮೊದಲೇ ಆದಿ ತಂದೆತಾಯಿಗಳು ಬೀಳುವಿಕೆಗೆ ಒಳಗಾದರು. ದೇವರಿಗೂ ಮಾನವನಿಗೂ ವಿರೋಧಿಯಾದ ಸೈತಾನನು ಕರ್ತನ ಈ ಯೋಜನೆಯನ್ನು ಇಲ್ಲವೆನಿಸಬೇಕೆಂದು ಪ್ರಯತ್ನಿಸಿ ತನ್ನ ಇಷ್ಟ ನೆರವೇರುವಂತೆ ದೂಡಿಬಿಟ್ಟನು.

ಇದರಿಂದ ಆದಿ ತಂದೆತಾಯಿಗಳು ಹೊಂದಿದ ಫಲಗಳು:

1. ಏದೇನ್ ತೋಟದಿಂದ ಹೊರಡಿಸಲ್ಪಟ್ಟರು.
2. ಜೀವವೃಕ್ಷದಿಂದ ಆಗಲಿಸಲ್ಪಟ್ಟರು.

ನಾನು ನಿನ್ನ ನಾಮದಲ್ಲಿ ಭಯಭಕ್ತಿಯಿಂದಿರುವಂತೆ ಏಕಮನಸ್ಸನ್ನು ಅನುಗ್ರಹಿಸು (ಕೀರ್ತ. 86:11).

3. ಕರ್ತನನ್ನು ಬಿಟ್ಟು ಅಗಲಿದರು.
4. ದೇವಮಹಿಮೆಯನ್ನು ಕಳೆದುಕೊಂಡರು.
5. ಪಾಪಿಗಳಾದರು
6. ಮರಣದಂಡನೆಗೆ ಒಳಗಾದರು.
7. ಅವರ ನಿಮಿತ್ತ ಭೂಮಿ ಶಪಿಸಲ್ಪಟ್ಟಿತು.

ಅ. ಸರ್ಪಕ್ಕೆ ಶಾಪ ಬಂದಿತು (ಆದಿ. 3:14–15)

ಆ. ಸ್ತ್ರೀಯ ಮೇಲೆ ನ್ಯಾಯತೀರ್ಪು (ಆದಿ. 3:16)

ಇ. ಮಾನವನಿಗೆ ನ್ಯಾಯತೀರ್ಪು (ಆದಿ. 3:17–19).

**ಸರ್ಪಕ್ಕೆ ಕೊಟ್ಟ ಶಾಪದಲ್ಲಿ ಕರ್ತನು, ಒಂದು ವಿಮೋಚನೆಯ ವಾಗ್ದಾನವನ್ನಿಟ್ಟನು** (ಆದಿ. 3:15).

**ಸ್ತ್ರೀಯ ಸಂತಾನ– ಕ್ರಿಸ್ತನು**

**ಸರ್ಪದ ಸಂತಾನ –ಸೈತಾನ**

ಪಾಪದ ನಿಮಿತ್ತವಾಗಿ ಮಾನವನು ದೇವಸನ್ನಿಧಾನವನ್ನು ಬಿಟ್ಟು ಹಿಡಿಸಲ್ಪಟ್ಟಾಗ ಕರ್ತನು ಕೃಪಾಳುವಾಗಿ ಪಾಪಗ್ರಸ್ಥ ಮಾನವನು ಕರ್ತನ ಬಳಿಗೆ ಹಿಂದಿರುಗುವದಕ್ಕಾಗಿ ವಿಮೋಚನಾ ಮಾರ್ಗವನ್ನು ನೇಮಿಸಿದನು (ಆದಿ. 3:21). ಅವರಿಗೆ ಚರ್ಮದ ಅಂಗಿಗಳನ್ನು ಕೊಟ್ಟನು. ಚರ್ಮಕ್ಕಾಗಿ ಒಂದು ಪ್ರಾಣಿ ಕೊಲ್ಲಲ್ಪಡಬೇಕಾಯಿತು. ಕೊಲ್ಲಲ್ಪಟ್ಟ ಪಾಪವಿಲ್ಲದ ಮೃಗವು, ಪಾಪಿಗಳ ಪಾಪನಿವಾರಣೆಗಾಗಿ ಹೊಡೆಯಲ್ಪಟ್ಟ ಕುರಿಮರಿಯಾದ ಯೇಸುಕ್ರಿಸ್ತನಿಗೆ ಮುನ್ಸೂಚನೆ, ಅದರ ರಕ್ತವು ಯೇಸುಕ್ರಿಸ್ತನ ರಕ್ತಕ್ಕೆ ಗುರುತು. ಆ ಮೃಗದ ಚರ್ಮವು ಕ್ರಿಸ್ತನ ನೀತಿಗೂ ಪರಿಶುದ್ಧತೆಗೂ ಗುರುತು. ಪಾಪಮಾಡಿದ ಮಾನವನು ನಿರ್ವಾಣಿಯಾದಾಗ ತನ್ನ ನಿರ್ವಾಣವನ್ನು ಮುಚ್ಚಲು ಅಸಹಾಯಕನಾದದ್ದನ್ನು ಕಂಡು, ಅವನಿಗೆ ಸ್ವಂತವಲ್ಲದ್ದೂ, ದೋಷವಿಲ್ಲದ್ದೂ ಆದಂಥ ಮತ್ತೊಂದರ ಚರ್ಮದಿಂದ ಕರ್ತನು ಅವನನ್ನು ಮುಚ್ಚಿದನು. ಮಾನವನು ಪಾಪಿಯೂ, ಕರ್ತನ ಮುಂಭಾಗದಲ್ಲಿ ನಿರ್ವಾಣಿಯೂ ಅಸಹಾಯಕನೂ ಆಗಿದ್ದರಿಂದ ಮಾನವನನ್ನು ಕರ್ತನು ತಾನೇ ಕನಿಕರಿಸಿ ಕ್ರಿಸ್ತನ ಮೂಲಕ ನಮಗೆ ಆತನ ಪರಿಶುದ್ಧತೆಯನ್ನು ವಸ್ತ್ರವಾಗಿ ಅನುಗ್ರಹಿಸಿದ್ದಾನೆ.

ಈ ರೀತಿಯಾಗಿ ಪಾಪಮಾಡಿದ ಮಾನವನ ಮನ:ಸಾಕ್ಷಿ ಎಚ್ಚರಗೊಂಡಿತು. ಅನಂತರದ ಕಾಲದಲ್ಲಿ ಕರ್ತನು ಮಾನವನೊಂದಿಗೆ ಮನ:ಸಾಕ್ಷಿಯು ಮೂಲಕವೇ ಸಂಪರ್ಕಿಸಿದನು. ಆದ್ದರಿಂದ ಆ ಕಾಲವನ್ನು ಮನ:ಸಾಕ್ಷಿಯ ಕಾಲವೆಂದು ಹೇಳಲಾಯಿತು.

ಮುಂದುವರಿಯುವದು................

**ಸಂಗ್ರಹ.**

---

## ಕವನಗಳು

ನನಗೆ ಬೇಕು ನಿನ್ನ ಸನ್ನಿಧಾನ
ಅಲ್ಲಿದೆ ದೈವೀಕ ಸಮಾಧಾನ
ನಿನ್ನಾಲಯದಲ್ಲಿ ಕಳೆದ ದಿನ
ನನ್ನ ಜೀವಿತದಲ್ಲೇ ಶ್ರೇಷ್ಠ ದಿನ

ನನ್ನ ಮೇಲಿನ ನಿನ್ನ ಪ್ರೀತಿ ಅಪಾರ
ಅಳೆಯಲಾರದಷ್ಟು ಉದ್ದ–ಅಗಲ–ಆಳ ಎತ್ತರ
ನಿನ್ನ ಹೃದಯವೇ ಪ್ರೀತಿ ಕೃಪೆಗಳ ಸಾಗರ
ಯೇಸುವೇ ನಿನ್ನ ಪ್ರೀತಿ ಶಾಶ್ವತ. ಅಮರ, ಮಧುರ

**ಸಹೋ॥ ದೀಪ್ತಿ ಮಂಗಲ.**

ಕರ್ತನೇ, ನನ್ನ ದೇವರೇ, ಮನ:ಪೂರ್ವಕವಾಗಿ ನಿನ್ನನ್ನು ಕೊಂಡಾಡುವೆನು;
ಎಂದೆಂದಿಗೂ ನಿನ್ನ ನಾಮವನ್ನು ಘನಪಡಿಸುವೆನು (ಕೀರ್ತ. 86:12).

# ಹೃದಯ

ವಯಸ್ಕರ ಸ್ವರ

"ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ ಅದರೊಳಗಿನಿಂದ ಜೀವಧಾರೆಗಳು ಹೊರಡುವವು" (ಜ್ಞಾನೋ. 4:23).

ಹೃದಯ ಎಂಬುವುದು ಮನುಷ್ಯನ ಶರೀರದಲ್ಲಿರುವ ಮುಖ್ಯ ಭಾಗವಾಗಿದೆ. ಹೃದಯು ಬಡಿತ ನಿಂತು ಹೋಗುವುದಾದರೆ ಎಲ್ಲವೂ ನಿಂತ ಹಾಗೆಯೇ. ಈ ಹೃದಯದಲ್ಲಿಯು ಒಳ್ಳೇದೂ ಕೆಟ್ಟದ್ದೂ ಹೊರಡುವುದು. ದೇವರ ವಾಕ್ಯ ಹೇಳುತ್ತದೆ, "ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವುದು" (ಲೂಕ. 6:45). ಪ್ರವಾದಿಯಾದ ಯೆರೆಮೀಯನು ಬರೆಯುತ್ತಾನೆ, "ಹೃದಯವು ಎಲ್ಲಕ್ಕಿಂತ ವಂಚಕ, ಗುಣವಾಗದ ರೋಗಕ್ಕೆ ಒಳಗಾಗಿದೆ ಅದನ್ನು ಯಾರು ತಿಳಿದಾರು? (ಯೆರೆ. 17:9).

ಭಕ್ತನಾದ ದಾವೀದನು ಪ್ರಾರ್ಥಿಸುತ್ತಾನೆ, "ದೇವರೇ ಶುದ್ಧವಾದ ಹೃದಯವನ್ನು ನಿರ್ಮಿಸು" (ಕೀರ್ತ. 51:10). ದೇವರು ನಮ್ಮನ್ನು ನೋಡುವಾಗ ಹೊರಗನ್ನು ನೋಡಿ ಆಶೀರ್ವದಿಸುವುದಿಲ್ಲ, ಬದಲಾಗಿ ಹೃದಯ ನೋಡಿ ಆಶೀರ್ವದಿಸುವನು. "ಹೃದಯದಲ್ಲಿ ಆಗುವ ಸುನ್ನತಿಯೇ ನಿಜವಾದ ಸುನ್ನತಿ ಹೊರತು ಹೊರಗಡೆಯ ಸುನ್ನತಿ ನಿಜವಾದ ಸುನ್ನತಿಯಲ್ಲ" (ರೋಮ. 2:29). ಇಂದು ನಾವು ವಾಕ್ಯದ ಬೆಳಕಿನಲ್ಲಿ ನಾನಾ ತರದ ಹೃದಯುದ ಕುರಿತಾಗಿ ಧ್ಯಾನಿಸೋಣವೇ?

1) **ಒಡೆದ ಹೃದಯ** (ಯೆರೆ. 23:9). ಒಡೆದ ಹೃದಯ ಅಥವಾ ಜಜ್ಜಲ್ಪಟ್ಟ ಹೃದಯು, ಪಶ್ಚಾತ್ತಾಪದ ಹೃದಯು ದಾವೀದರಾಜನು ಪಾಪ ಮಾಡಿದ ನಂತರ ಪಾಪವೆಂದು ತಿಳಿದು ಪಶ್ಚಾತ್ತಾಪಪಟ್ಟು ಒಡೆಯಲ್ಪಟ್ಟ ಹೃದಯವುಳ್ಳವನಾಗಿ ದೇವರಲ್ಲಿ ಕ್ಷಮೆಯಾಚಿಸುತ್ತಾನೆ (ಕೀರ್ತ. 51:17). ಪಶ್ಚಾತ್ತಾಪಪಟ್ಟ ಹೃದಯ ದೇವರಿಗೆ ಇಷ್ಟ ಯಜ್ಞ, ಜಜ್ಜಿ ಹೋದ ದೀನಮನಸ್ಸನ್ನು ದೇವರು ಉಜ್ಜೀವಿಸ ಮಾಡುತ್ತಾನೆ (ಯೆಶಾ. 51:17). "ಇಸ್ರಾಯೇಲೇ, ನೀನು ಹಿಂದಿರುಗಿ ನಿನ್ನ ದೇವರಾದ ಯೆಹೋವನನ್ನು ಸೇರಿಕೋ; ನಿನ್ನ ಅಪರಾಧದಿಂದಲೇ, ನೀನು ಮುಗ್ಗರಿಸಿ ಬಿದ್ದಿ. [ಪಶ್ಚಾತ್ತಾಪದ] ಮಾತುಗಳನ್ನು ತೆಗೆದುಕೊಂಡು ಯೆಹೋವನ ಬಳಿಗೆ ಹಿಂದಿರುಗಿ ಆತನಿಗೆ ನಮ್ಮ ಅಪರಾಧವನ್ನು ಸಂಪೂರ್ಣವಾಗಿ ನಿವಾರಣೆಮಾಡಿ [ನಮ್ಮಲ್ಲಿನ] ಒಳ್ಳೆಯದನ್ನು ಅಂಗೀಕರಿಸು; ನಮ್ಮ ಸ್ತೋತ್ರಗಳೆಂಬ ಹೋರಿಗಳನ್ನು ಅರ್ಪಿಸುವೆವು" (ಹೋಶೆ. 14:1–2). 'ಪಶ್ಚಾತ್ತಾಪ' ಎಂಬ ಪದ ಗ್ರೀಕ ಪದವಾದ 'ಮೆಟನೋಯ' ಎಂಬುವುದಾಗಿ ಅದರ ಅರ್ಥ. ಪಾಪದ ಕಾರಣದಿಂದ ಅಥವಾ ಪಾಪದ ಕುರಿತಾಗಿ ಮಾರ್ಪಟ್ಟ ಮನಸ್ಸು ಎಂಬುವುದಾಗಿದೆ. ಸಾಮಾನ್ಯವಾಗಿ ಉಜ್ಜೀವನ ಕೂಟಗಳು, ಬಿಡುಗಡೆ ಕೂಟಗಳು ನಡೆಯುವಾಗ ಬಹಳ ಜನರು ದೇವರ ವಾಕ್ಯ ಕೇಳಿ ಪಶ್ಚಾತ್ತಾಪಪಟ್ಟು ಒಪ್ಪಿಸಿಕೊಟ್ಟು ಮನಸ್ಸು ಬದಲಾಯಿಸುವುದುಂಟು. ಆದರೆ ಇನ್ನು ಕೆಲವು ಜನರು ಸ್ವಲ್ಪ ದಿವಸಗಳಿಗೆ ಮಾತ್ರ ಬದಲಾವಣೆ ಹೊಂದುವವರಿರುತ್ತಾರೆ. ಇದು ಉದ್ರೇಕದ ಪಶ್ಚಾತ್ತಾಪವಾಗಿದೆ. ನಿಜವಾದ ಪಶ್ಚಾತ್ತಾಪ ಎಂದರೆ ಮಾಡಿದ ತಪ್ಪನ್ನು ಒಪ್ಪಿ ಬಿಟ್ಟು ಬಿಡುವುದೇ ಆಗಿದೆ (ಜ್ಞಾನೋ. 28:13). ಇದು ದೇವರ ಕಾರ್ಯವೇ ಆಗಿರುತ್ತದೆ (ಅ.ಕೃ. 11:18).

ಲೂಕ 15ನೇ ಅಧ್ಯಾಯದಲ್ಲಿ ಕೆಟ್ಟು ಹೋದ ಮಗ ಒಡೆದ ಹೃದಯವುಳ್ಳವನಾಗಿ ತಂದೆಯ ಬಳಿಗೆ ಹಿಂತಿರುಗಿ ಬರುವುದನ್ನು ಕಾಣುತ್ತೇವೆ. ಯೋಬನು ಹೇಳುತ್ತಾನೆ, ನಾನು ಆಡಿದ್ದನ್ನು ತಿರಸ್ಕರಿಸಿ ಧೂಳಿನಲ್ಲಿಯೂ, ಬೂದಿಯಲ್ಲಿಯೂ ಕುಳಿತು ಪಶ್ಚಾತ್ತಾಪಪಡುತ್ತೇನೆ (ಯೋಬ. 42:6). ಹನ್ನಳು ಒಡೆದ ಹೃದಯವುಳ್ಳವಳಾಗಿ ಪ್ರಾರ್ಥಿಸುವುದನ್ನು ಸತ್ಯವೇದದಲ್ಲಿ ಕಾಣಬಹುದು (1 ಸಮು. 1:15).

2) **ತೆರದ ಹೃದಯ** :– (ಅ.ಕೃ. 16:14) ಕರ್ತನು ಲುದ್ಯಳ ಹೃದಯವನ್ನು ವಾಕ್ಯಕ್ಕಾಗಿ ತೆರೆದನು. ವಾಕ್ಯವನ್ನು ಹೊಂದಬಾರದೆಂದು ಸೈತಾನನು ಹೃದಯು ಮುಚ್ಚಿಹಾಕುವನು (2 ಕೊರಿ. 4:3–9). ಆದುದರಿಂದ ಕೆಲವರು ಎಷ್ಟೇ ವಾಕ್ಯ ಕೇಳಿದರೂ ಸ್ವೀಕರಿಸಲಾಗದೇ, ಬಿಡುಗಡೆಯಾಗದೆ ಇರುವರು. ಅವರ ಮನಸ್ಸು ಮೊಬ್ಬಾಗಿ

ಯೆಹೋವನೇ, ನನ್ನನ್ನು ರಕ್ಷಿಸುವ ದೇವರೇ, ಹಗಲಿರುಳು
ನಿನಗೆ ಮೊರೆಯಿಡುತ್ತೇನೆ (ಕೀರ್ತ. ೮೮:1).

ಹೋಗಿದೆ. ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ (ಎಫೆ 4:18). ಭಕ್ತನಾದ ದಾವೀದನು ದೇವರಲ್ಲಿ ಪ್ರಾರ್ಥಿಸುತ್ತಾನೆ **'ನನ್ನ ಕಣ್ಣು ತೆರೆ; ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೇನು'** (ಕೀರ್ತ 119:18) ಯನ್ನ ಯಂಬ್ರರಂತೆ ಸಭೆಯಲ್ಲಿ ಎಷ್ಟು ವಾಕ್ಯ ಕೇಳಿದರೂ ಸತ್ಯದ ಪರಿಜ್ಞಾನ ಹೊಂದಲಾಗದೆ ಹೋಗುವರು (2 ತಿಮೊ. 3:7–8). ಅವರ ಮೂರ್ಖತನ ಒಂದು ದಿನ ಎಲ್ಲರಿಗೂ ತಿಳಿದು ಬರುವದು (2 ತಿಮೊ. 3:9). ಅ.ಕೃ. 13ನೇ ಅಧ್ಯಾಯದಲ್ಲಿ ಪೌಲನು ಅಧಿಪತಿಗೆ ವಾಕ್ಯವನ್ನು ತಿಳಿಸುವಾಗ ಎಲುಮನೆಂಬ ಮಂತ್ರವಾದಿ ಕ್ರಿಸ್ತನನ್ನು ನಂಬದಂತೆ ಪ್ರಯತ್ನಿಸಿದನು. ಹೃದಯ ತೆರೆಯುವುದರಲ್ಲಿ 2 ವಿಷಯಗಳಿವೆ. ಕೆಲವೊಮ್ಮೆ ದೇವರೇ ನಮ್ಮ ಹದ್ಯಯವನ್ನು ತೆರೆಯುತ್ತಾನೆ, ಅದರೆ ಕೆಲವೊಮ್ಮೆ ನಾವೇ ಕರ್ತನಿಗಾಗಿ ಹದ್ಯಯವನ್ನು ತೆರೆಯಬೇಕಾಗಿದೆ (ಪ್ರಕ. 3:20). "ಯಾವನಾದರೂ ನನ್ನ ಸ್ವರ ಕೇಳಿ ಬಾಗಿಲು ತೆರೆದರೆ ನಾನು ಒಳಗೆ ಬರುವೆನು. ದೇವಮಗುವೇ ದೇವರ ವಾಕ್ಯಕ್ಕಾಗಿ, ಕ್ರಿಸ್ತನಿಗಾಗಿ ನಿನ್ನ ಹೃದಯವನ್ನು ತೆರೆ.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

## ಡಿಜಿಎಮ್ ಬೇತೇಲ್ ಅಂಕಣ

- **12ನೇ ಕೆರೀತ್ ಕೂಟವು ಅಕ್ಟೋಬರ್ 26 ರಿಂದ ನವೆಂಬರ್ 4ರವರೆಗೆ ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಡುವದು.**

# ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

## ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ, ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0091 820 2559886**

ನೀತಿಯು ಆತನ ಮುಂದೆ ಹೋಗುತ್ತಾ ನಾವು ಆತನ
ಹೆಜ್ಜೆ ಹಿಡಿದು ನಡೆಯುವಂತೆ ದಾರಿ ಮಾಡುವದು (ಕೀರ್ತ. ೮೫:೧೩).

# ಸೌಂದರ್ಯ ವರ್ಧಕ ನಿಂಬೆ

ಆರೋಗ್ಯ ಸ್ವರ



ನಿಸರ್ಗ ಲಭ್ಯ ಸಾಧನಗಳೇ ಸ್ತ್ರೀಯ ಸೌಂದರ್ಯ ಹೆಚ್ಚಿಸಬಲ್ಲವು. ಅಂತಹ ಸಾಧನಗಳಲ್ಲಿ ಸರ್ವರೋಗ ನಿವಾರಕ ಎಂದೇ ಹೆಸರಾಗಿರುವ ನಿಂಬೆ ಹಣ್ಣು ಕೂಡಾ ಒಂದು. ಅದರಲ್ಲೂ ಹೆಂಗಳೆಯರ ಸೌಂದರ್ಯ ಹೆಚ್ಚಿಸುವಲ್ಲಿ ಇದರ ಪಾತ್ರ ಹಿರಿದು.

- **ಮುಖಕ್ಕೆ ಕಾಂತಿ** :– ನಿಂಬೆ ಹಣ್ಣಿನ ಒಣಗಿದ ಸಿಪ್ಪೆಯನ್ನು ಪುಡಿಮಾಡಿಕೊಂಡು ಅದರ ನಯವಾದ ಚೂರ್ಣವನ್ನು ನೀರಿನಲ್ಲಿ ಕಲಸಿ ಪ್ರತಿದಿನ ಮುಖಕ್ಕೆ ಲೇಪಿಸುತ್ತಾ ಬನ್ನಿ. ಆರು ತಿಂಗಳ ನಂತರ ನಿಮ್ಮ ಮುಖದ ಕಾಂತಿಗೆ ನೀವೇ ಬೆರಗಾಗುವಿರಿ.
- **ಮೊಡವೆ ನಿವಾರಣೆಗೆ** : ನಿತ್ಯ ಬೆಳಿಗ್ಗೆ ನಿಂಬೆ ರಸವನ್ನು ಮುಖಕ್ಕೆ ಲೇಪಿಸಿ ಅಥವಾ ಹಾಲಿನ ಕೆನೆಯ ಜೊತೆಗೆ ನಿಂಬೆರಸ ಸೇರಿಸಿ ಲೇಪಿಸಿ ಅಥವಾ ನಿಂಬೆರಸದ ಜೊತೆಗೆ ಜೇನು ಬೆರೆಸಿಯು ಲೇಪಿಸಬಹುದು. ಇದರಿಂದ ಮುಖದ ಕಲೆಗಳು ಮಾಯವಾಗುತ್ತವೆ.
- ಒಂದು ಚಿಟಿಕೆ ಅರಿಶಿನ, 2 ಚಿಟಿಕೆ ಕರ್ಪೂರದಪುಡಿ, 1 ಚಮಚ ನಿಂಬೆರಸ ಬೆರೆಸಿ ಪೇಸ್ಟ್ ತಯಾರಿಸಿ ಮೊಡವೆಗೆ ಹಚ್ಚಿ ಒಣಗಿದ ನಂತರ ತಣ್ಣೀರಿನಿಂದ ತೊಳೆಯಿರಿ.
- ತುಟಿಗಳ ರಕ್ಷಣೆ :– ತುಟಿಗಳ ಬಣ್ಣ ಕೆಂಪಾಗಬೇಕಾದರೆ ನೇರಳೆ ಹಣ್ಣನ್ನು ತಿಂದು ತಕ್ಷಣ ತುಟಿಗಳನ್ನು ತೊಳೆದು ನಿಂಬೆಹಣ್ಣಿನ ಸಿಪ್ಪೆಯಿಂದ ಉಜ್ಜಿದರೆ ಕಪ್ಪು ಬಣ್ಣ ಹೋಗುವುದು.
- **ಹೊಟ್ಟು ನಿವಾರಣೆ** :– ಒಣಗಿದ ನಿಂಬೆ ಸಿಪ್ಪೆ ಚೂರ್ಣವನ್ನು ಹೊನಗೊನೆ ಸೊಪ್ಪಿನ ರಸದಲ್ಲಿ ಕಲಸಿ ಒಂದು ದಿನ ಬಿಟ್ಟು ತಲೆಗೆ ಹಚ್ಚಿ ಸ್ನಾನ ಮಾಡಿದರೆ ತಲೆಯ ಹೊಟ್ಟು ನಿವಾರಣೆಯಾಗುತ್ತದೆ.
- **ಕೂದಲು ಉದುರುತ್ತಿದ್ದರೆ** :– ನಿಂಬೆರಸವನ್ನು ತಲೆಗೂದಲಿನ ಬುಡಕ್ಕೆ ಮೃದುವಾಗಿ ತಿಕ್ಕಿ 2–3 ಗಂಟೆ ಬಿಟ್ಟು ಅನಂತರ ಸ್ನಾನ ಮಾಡಬೇಕು.
- ಎಣ್ಣೆ ಚರ್ಮ ಇರುವವರು ಸ್ನಾನ ಮಾಡುವ ಅರ್ಧ ಗಂಟೆ ಮುಂಚೆ ನಿಂಬೆರಸ ಹಾಗೂ ಸೌತೆರಸವನ್ನು ಬೆರೆಸಿ ಹಚ್ಚಬೇಕು.
- ಕಲೆಗಳಿಗೆ:– ಕಿತ್ತಳೆರಸ, ಗಜ್ಜರಿರಸಕ್ಕೆ ಹಾಲನ್ನು ಸಮಪ್ರಮಾಣದಲ್ಲಿ ಬೆರೆಸಿ ನಾಲ್ಕೈದು ತೊಟ್ಟು ನಿಂಬೆರಸ ಹಾಕಿ ಮುಖಕ್ಕೆ ಲೇಪಿಸಿಕೊಂಡು ನಂತರ ತೊಳೆದರೆ ಮುಖದ ಕಲೆಗಳು ಮಾಯವಾಗುತ್ತದೆ.
- ತುಳಸಿ ಎಲೆಗಳನ್ನು ಒಣಗಿಸಿ ಪುಡಿ ಮಾಡಿಟ್ಟುಕೊಂಡು, ಪ್ರತಿದಿನ ಎರಡು ಚಮಚ ಈ ಪುಡಿಗೆ ನಿಂಬೆ ಹಣ್ಣು ಹಾಗೂ ಹಾಲನ್ನು ಸಮಪ್ರಮಾಣದಲ್ಲಿ ಕಲೆಸಿ ಮುಖಕ್ಕೆ ಮತ್ತು ಕತ್ತಿಗೆ ಹಚ್ಚಿಕೊಂಡು ಅರ್ಧ ಗಂಟೆ ಬಳಿಕ ಬೆಚ್ಚಗಿನ ನೀರಿನಲ್ಲಿ ಮುಖ ತೊಳೆಯಿರಿ ಆಗ ಚರ್ಮದ ಕಾಂತಿ ಇಮ್ಮಡಿಸುತ್ತದೆ.
- ನಿತ್ಯವೂ ಟೊಮೆಟೊ ರಸ, ಕ್ಯಾರೆಟ್ ರಸ, ಸೌತೆರಸ ಹಾಗೂ ನಿಂಬೆರಸಗಳನ್ನು ತಲಾ ಎರಡೆರಡು ಚಮಚ ಬೆರೆಸಿ ಮುಖಕ್ಕೆ ಹಾಗೂ ಕುತ್ತಿಗೆಗೆ ಹಚ್ಚಿಕೊಳ್ಳುವುದರಿಂದ ಚರ್ಮದ ಕಾಂತಿ ಹೆಚ್ಚುತ್ತದೆ.
- ಮೈ ಕೈ ಒಡೆದರೆ 4–5 ಚಮಚ ಶೇಂಗಾ ಎಣ್ಣೆಗೆ 7–8 ಹನಿ ನಿಂಬೆರಸ, ಚಿಟಿಕೆ ಅರಿಶಿನದ ಪುಡಿ ಹಾಕಿ ಚೆನ್ನಾಗಿ ಕಲಸಬೇಕು ರಾತ್ರಿ ಮಲಗುವ ಮುನ್ನ ಕೈಕಾಲಿಗೆ ಹಚ್ಚಿದರೆ ಚರ್ಮ ಮೃದುವಾಗುತ್ತದೆ.
- ಪ್ರತಿದಿನ ಬೆಳಿಗ್ಗೆ ಒಂದು ಲೋಟ ಬಿಸಿ ನೀರಿಗೆ ಒಂದು ದೊಡ್ಡ ನಿಂಬೆ ಹಣ್ಣಿನ ರಸವನ್ನು ಪೂರ್ತಿಯಾಗಿ ಹಿಂಡಿ ಬರಿಯ ಹೊಟ್ಟೆಗೆ ಕುಡಿಯಬೇಕು ಇದಕ್ಕೆ ಸಕ್ಕರೆ, ಉಪ್ಪು ಏನನ್ನು ಹಾಕಬಾರದು ಇದರಿಂದ ಚರ್ಮ ವ್ಯಾಧಿಗಳು ನಿವಾರಣೆಯಾಗುವುದಲ್ಲದೆ ಚರ್ಮದ ಕಾಂತಿಯೂ ಹೆಚ್ಚುತ್ತದೆ.

ನಿನ್ನ ಮಂದಿರದಲ್ಲಿ ವಾಸಿಸುವವರು ಧನ್ಯರು, ಅವರು ನಿತ್ಯವೂ ನಿನ್ನನ್ನು ಕೀರ್ತಿಸುತ್ತಾ ಇರುತ್ತಾರೆ (ಕೀರ್ತ. 84:4).

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಹತ್ತು ಕಾರ್ಮಿಕ ಸಂಘಟನೆಗಳು 12 ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ಸಹಿತ ದೇಶವ್ಯಾಪಿ ನಡೆಸಿದ ಮುಷ್ಕರ ಬಹುತೇಕ ಯಶ್ವಸಿಯಾಗಿದೆ, ಒಟ್ಟಾರೆ ಒಂದು ದಿನದ ಮುಷ್ಕರದಿಂದಾಗಿ ಸುಮಾರು 25 ಸಾವಿರ ಕೋಟಿ ರೂ. ನಷ್ಟ ಉಂಟಾಗಿದೆ ಎಂದು ಕೈಗಾರಿಕಾ ಸಂಸ್ಥೆ ಅಸೋಚಾವ್ ಅಂದಾಜು ಮಾಡಿದೆ.

- 22 ವರ್ಷಗಳ ಕಾಯುವಿಕೆಗೆ ಸೂಕ್ತ ಫಲವೇ ಸಿಕ್ಕಿದೆ. ಶ್ರೀಲಂಕಾ ನೆಲದಲ್ಲಿ ಭಾರತ ಟೆಸ್ಟ್ ಸರಣಿ ಗೆದ್ದು ಹೊಸ ಇತಿಹಾಸ ನಿರ್ಮಿಸಿದೆ. ಇಲ್ಲಿನ ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ ಗ್ರೌಂಡ್‌ನಲ್ಲಿ ನಡೆದ 3ನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ 117 ರನ್ನುಗಳ ಜಯಭೇರಿ ಮೊಳಗಿಸಿದ ಟೀಮ್ ಇಂಡಿಯಾ ಸರಪಣಿಯನ್ನು 2–1 ಅಂತರದಿಂದ ಗೆದ್ದು ಬೀಗಿದೆ.

- ರಾಜ್ಯಕ್ಕೆ ಮಿದ್ಯುತ್ ಪೂರೈಸುವ ಪ್ರಮುಖ ಕೇಂದ್ರವಾಗಿರುವ ಲಿಂಗನಮಕ್ಕಿ ಜಲಾಶಯದಲ್ಲಿ ಈಗಿರುವ ನೀರಿನಿಂದ ಕೇವಲ 3 ತಿಂಗಳು ಮಾತ್ರ ವಿದ್ಯುತ್ ಉತ್ಪಾದಿಸಬಹುದು ಮುಂದೆ ಮಳೆ ಬಾರದಿದ್ದರೆ ವಿದ್ಯುತ್ ಉತ್ಪಾದನೆ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಲಿಂಗನಮಕ್ಕಿ ಜಲಾಶಯದಲ್ಲಿ ಶೇ. 43 ರಷ್ಟು ನೀರು ಮಾತ್ರ ಸಂಗ್ರಹವಿದೆ.

- ಲಾಸ್ ಏಂಜಲೀಸ್ 57 ರ ಹರೆಯದ ಭಾರತೀಯ ಅಮೆರಿಕನ್ ಮಹಿಳೆ ಜಗದೀಪ್ ಗ್ರೇವಾಲ್ ಅವರು ಅಮೆರಿಕದ ಕ್ಯಾಲಿಫೋರ್ನಿಯಾದ ಸ್ಯಾಕ್ರಮಾಟೋದಲ್ಲಿ ಕಳೆದ 166 ವರ್ಷಗಳಲ್ಲೇ ಮೊತ್ತ ಮೊದಲ ಮಹಿಳಾ ಪೋಸ್ಟ್ ಮಾಸ್ಟರ್ ಹುದ್ದೆಗೆ ಭಡ್ತಿ ಪಡೆದಿದ್ದಾರೆ.

- ನ್ಯೂಯಾರ್ಕ್‌ನಿಂದ ಲಂಡನ್‌ಗೆ ಕೇವಲ ಮೂರು ಗಂಟೆಯಲ್ಲಿ ತಲುಪಬಹುದಾದ ಸೂಪರ್‌ಸಾನಿಕ್ (ಧ್ವನಿವೇಗವನ್ನೂ ಮೀರಿದ ವೇಗದಲ್ಲಿ ಚಲಿಸುವ) ವಿಮಾನವನ್ನು ಭಾರತ ಹಾಗೂ ವಿದೇಶಿ ಎಂಜಿನಿಯರ್‌ಗಳು ಇಲ್ಲಿ ಅಭಿವೃದ್ಧಿಪಡಿಸುತ್ತಿದ್ದಾರೆ.

- ಅತ್ಯಂತ ಸುದೀರ್ಘ ಕಾಲ ಬ್ರಿಟನ್ ರಾಣಿಯಾಗಿರುವ ಹಿರಿಮೆಗೆ ಎಲೀಜಬೆತ್ ಪಾತ್ರರಾಗಿದ್ದಾರೆ. ಅವರು ಬ್ರಿಟನ್ ರಾಣಿಯಾಗಿ 23, 226 ದಿನ ಅಂದರೆ 63 ವರ್ಷ ಪೂರೈಸಿದ್ದಾರೆ.

- ಹೊದೈದಾಹ್ ಬಂದರಿನ ಅಲ್‌ಖೋಖ ಎಂಬಲ್ಲಿ ಎರಡು ದೋಣಿಗಳ ಮೇಲೆ ಬಾಂಬ್‌ಗಳು ಅಪ್ಪಳಿಸಿದವು. ಅದರಲ್ಲಿ 20ಕ್ಕೂ ಹೆಚ್ಚು ಭಾರತೀಯರಿದ್ದರು ಎನ್ನಲಾಗಿದೆ. ಈ ದಾಳಿಯಲ್ಲಿ 12 ಮಂದಿ ಶಿಯಾ ಬಂಡುಕೋರರು ಸತ್ತಿದ್ದಾರೆ ಎಂದು ಯೆಮನ್ ಭದ್ರತಾ ಪಡೆ ಅಧಿಕಾರಿಗಳು ದೃಢಪಡಿಸಿದ್ದಾರೆ.

---

## ಪ್ರಾರ್ಥನಾ ಮನವಿಗಳು

- **ದೇವರ ಸ್ವರ ಮಾಸ ಪತ್ರಿಕೆಯ ಸೇವೆಯು ವಿಸ್ತರಿಸುವಂತೆ ಇದರ ಮೂಲಕ ಅನೇಕರು ರಕ್ಷಣೆ ಬರುವಂತೆ**
- **ನಮ್ಮ ರಾಜ್ಯದ, ದೇಶದ ಎಲ್ಲಾ ಅಧಿಕಾರಿಗಳಿಗಾಗಿ ಪ್ರಾರ್ಥಿಸಿರಿ.**
- **ಯಾವುದೇ ಅಂಟು ರೋಗಗಳು ದೇಶದಲ್ಲಿ ಹರಡದಂತೆ ಪ್ರಾರ್ಥಿಸಿರಿ (ವಿಮೋ. 15:26).**
- **ಪ್ರತಿಯೊಂದು ವಿಶ್ವಾಸಿಗಳು ರಕ್ಷಣೆಯಲ್ಲಿ, ಪರಿಶುದ್ಧತೆಯಲ್ಲಿ, ನಂಬಿಕೆಯಲ್ಲಿ ಸ್ಥಿರವಾಗಿ ನಿಲ್ಲುವಂತೆ, ಕರ್ತನ ಬರೋಣದಲ್ಲಿ ಎತ್ತಲ್ಪಡುವಂತೆ**
- **ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಸಮಾಧಾನ ನೆಲೆಸಲು, ಯಾವುದೇ ಅತಿವೃಷ್ಟಿ, ಅನಾವೃಷ್ಟಿಗಳು ಸಂಭವಿಸದ ಹಾಗೆ ಪ್ರಾರ್ಥಿಸಿರಿ.**
- **ಎಲ್ಲಾ ಬರಗಾಲ, ಬಡತನ, ನೀರಿನ ಕೊರತೆ, ವಿದ್ಯುತ್‌ಚ್ಛಕ್ತಿಯ ಕೊರತೆಗಳು ನೀಗುವಂತೆ.**

ಉದಯದಲ್ಲಿ ನಿನ್ನ ಕೃಪೆಯಿಂದ ನಮ್ಮನ್ನು ಸಂತೃಪ್ತಿಪಡಿಸು;
ಆಗ ಜೀವಮಾನದಲ್ಲೆಲ್ಲಾ ಉಲ್ಲಾಸಿಸಿ ಹರ್ಷಿಸುವೆವು (ಕೀರ್ತ. 90:14).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 0091 9902334941**

---

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

---

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0091 9902334941, 0091 8202002781, 0091 9964070654**

ನ್ಯಾಯತೀರ್ಪು ನೀತಿಗೆ ತಿರುಗಿಕೊಳ್ಳುವದು; ಯಥಾರ್ಥಚಿತ್ತರೆಲ್ಲರೂ ಅದನ್ನೇ ಅನುಸರಿಸುವರು (ಕೀರ್ತ. 94:15).

# ರೆಕ್ಕಗಳ ಕೆಳಗೆ !

**"ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು. ಆತನು ನಿನ್ನನ್ನು ತನ್ನ ರೆಕ್ಕೆಗಳಿಂದ ಹೊದಗಿಸುವನು"** (ಕೀರ್ತ. 91:1–4).

ದೇವರ ಆಶ್ರಯ ಎಷ್ಟು ಬಲವಾದದ್ದು, ಆತನನ್ನು ಆಶ್ರಯಿಸುವದರ ಮೂಲಕ ಯಾವ ರೀತಿ ಮಾನವನು ರಕ್ಷಿಸಲ್ಪಡುವನು ಎಂಬುದನ್ನು ಕುರಿತು ಸತ್ಯವೇದದಲ್ಲಿ ಬಹುಸುಂದರವಾಗಿ ವರ್ಣಿಸಲ್ಪಟ್ಟಿರುವದು. ಕೀರ್ತನೆ 91ರಲ್ಲಿ ಕರ್ತನು ಒಂದು ಒಳ್ಳೆಯ ತಾಯಿ ಪಕ್ಷಿಯಂತೆ ತನ್ನ ಜನರನ್ನು ಕಾಪಾಡುವದನ್ನು ಕಾಣುತ್ತೇವೆ. 23ನೇ ಕೀರ್ತನೆಯಲ್ಲಿ ಕರ್ತನು ತನ್ನನ್ನು ಹಿಂಬಾಲಿಸುವ ಕುರಿಗಳನ್ನು ಒಬ್ಬ ಕುರುಬನು ಕಾಯುವಂತೆ ತನ್ನ ಜನರನ್ನು ಹೇಗೆ ಕಾಪಾಡುವನು ಎಂಬುದನ್ನು ಕಾಣುತ್ತೇವೆ. 121ನೇ ಕೀರ್ತನೆಯಲ್ಲಿ ನಿಮಗೆ ಸಹಾಯ ಒದಗುವ ಪರ್ವತವಾದ ಕರ್ತನಿಂದ ಒದಗುವ ಸಹಾಯದ ಕುರಿತಾಗಿ ಓದುತ್ತೇವೆ.

ಯೆಹೂದ್ಯ ಜನಾಂಗದವರು ಇಂದಿಗೂ ರಾತ್ರಿಯಲ್ಲಿ ಹಾಸಿಗೆಗೆ ಹೋಗುವ ಮೊದಲು ಕೀರ್ತನೆ 91ನ್ನು ಕುಟುಂಬವಾಗಿ ಓದಿ ಮಲಗುವರು. ಹೊಸ ಒಡಂಬಡಿಕೆಯ ಕಾಲದಲ್ಲಿರುವ ನಮಗೋ, ಕ್ರಿಸ್ತನ ಹೊರತು ಬೇರೆ ಯಾವ ರಕ್ಷಣೆಯೂ ಇಲ್ಲ. ಆತನ ರಕ್ತದ ಕೋಟೆಯೊಳಗೆ ಇರುವ ಪ್ರತಿಯೊಬ್ಬ ವಿಶ್ವಾಸಿಯನ್ನು ಈ ಲೋಕದ ಯಾವುದೇ ಅಂಧಕಾರ ಶಕ್ತಿಗಳು ಅಲುಗಿಸಲು ಸಾಧ್ಯವಿಲ್ಲ. ಒಂದು ಕೋಳಿ ತನ್ನ ರೆಕ್ಕೆಗಳ ಕೆಳಗೆ ಮೊಟ್ಟೆಗಳನ್ನಿಟ್ಟುಕೊಂಡು ಕಾವು ಕೊಡುವಾಗ ಮೊಟ್ಟೆಯೊಳಗಿರುವ ಬಿಳಿ ಹಾಗೂ ಹಳದಿಯ ಭಾಗಗಳು ಅದ್ಭುತವಾದ ರೀತಿಯಲ್ಲಿ ಮಾರ್ಪಾಟು ಹೊಂದಿ ಒಂದು ಚಿಕ್ಕ ಕೋಳಿಮರಿಯಾಗಿ ರೂಪುಗೊಂಡು ಹೊರಗೆ ಬರುವದು. ಅದೇ ರೀತಿಯಲ್ಲಿ ಉನ್ನತವಾದ ಪವಿತ್ರಾತ್ಮ ರೆಕ್ಕೆಗಳ ಮರೆಯಲ್ಲಿ ನೀವು ಇರುವಾಗ, ನಿಮ್ಮೊಳಗೆ ಮಹಿಮೆಯಾದ ಮಾರ್ಪಾಟುಗಳು ಉಂಟಾಗುವವು. ನೀವು ಮಹಿಮೆಯ ಮೇಲೆ ಮಹಿಮೆ ಹೊಂದಿ ರೂಪಾಂತರಗೊಳ್ಳುವಿರಿ. ಕ್ರಿಸ್ತನ ಸ್ವಭಾವಗಳು ಗುಣಾತಿಶಯಗಳು ನಿಮ್ಮೊಳಗೆ ಏರ್ಪಡುವವು. ಅನುದಿನವೂ ಕ್ರಿಸ್ತನ ಸಾರೂಪ್ಯವನ್ನು ಹೊಂದಿ ದೇವರೊಂದಿಗೆ ನಡೆಯುವಿರಿ. ಕರ್ತನು ನಿಮ್ಮನ್ನು ಅಗುಳಿ ಹಾಕಿದ ಉದ್ಯಾನ, ಬೇಲಿಯೊಳಗಿನ ಬುಗ್ಗೆ, ಮುಚ್ಚಿಮುದ್ರಿಸಿದ ಬಾವಿಯಾಗಿ ಇಟ್ಟಿರುವನು (ಪ್ರಸ. 4:12). ಎಂಬದನ್ನು ಮರೆಯಬಾರದು.

ನೀವು ಇರಬೇಕಾದ ಬಹುಮುಖ್ಯವಾದ ಐದು ರಕ್ಷಣೆಯ ವಲಯಗಳು ಇರುವವು :–

1. **ದೇವಮಹಿಮೆ**
2. **ರಕ್ಷಣೆಯ ನಾವೆ**
3. **ಒಡಂಬಡಿಕೆಯೊಳಗೆ**
4. **ಮೇಘದೊಳಗೆ**
5. **ದೇವಸಭೆ.**

1. **ದೇವ ಮಹಿಮೆ :–** ದೇವರು ಏದೇನ್ ತೋಟದಲ್ಲಿ ಆದಾಮ ಹವ್ವಳನ್ನು ಇಟ್ಟಾಗ, ಅಲ್ಲಿ ಕರ್ತನ ಮಹಿಮೆ ಅವರನ್ನು ಮುಚ್ಚಿತ್ತು. ಆದುದರಿಂದ ಅಲ್ಲಿ ವ್ಯಾಧಿ ಇಲ್ಲ, ಕಷ್ಟವಿಲ್ಲ, ಶಾಪವಿಲ್ಲ, ಮರಣವಿಲ್ಲ. ಸಂಜೆಯ ತಂಗಾಳಿಯಲ್ಲಿ ದೇವರು ಬಂದು ಅವರೊಂದಿಗೆ ಸಂಭಾಷಿಸುತ್ತಿದ್ದನು. ಆದಿ ತಂದೆ ತಾಯಿಗಳು, ಪಾಪ ಮಾಡದೇ ಆ ಮಹಿಮೆಯೊಳಗೆ ನೆಲೆಗೊಂಡಿದ್ದಿದ್ದರೆ, ಅವರಿಗೆ ಮರಣವು ಸಂಭವಿಸುತ್ತಲೇ ಇರಲಿಲ್ಲ. ದೇವರು ಅಲ್ಲಿಗೇ ನಿಂತುಬಿಡಲಿಲ್ಲ. ತಾನು ಸೃಷ್ಟಿಸಿದ ಮಾನವನು ಕಳೆದುಕೊಂಡ ದೇವಮಹಿಮೆಯನ್ನು ದೇವರ ಸಂಸರ್ಗವನ್ನು ಮತ್ತೆ ಹಿಂದಕ್ಕೆ ಪಡೆದುಕೊಳ್ಳಲು ಒಂದು ಮಾರ್ಗವನ್ನು ಅಂದೇ ಸಿದ್ಧಪಡಿಸಿದನು. ಅದುವೇ ಶಿಲುಬೆಯ ಮಾರ್ಗ. ಯಾರ್‍ಯಾರು ಯಜ್ಞಾರ್ಪಿತನಾದ ತನ್ನ ಏಕಕುಮಾರನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಟ್ಟು ಆತನನ್ನು ಅಂಗೀಕರಿಸುವರೋ ಅವರಿಗೆ ನಿತ್ಯ ಜೀವದ ಬಾಧ್ಯತೆಯನ್ನು ಅನುಗ್ರಹಿಸಿರುವನು.

2. **ಕ್ರಿಸ್ತನೆಂಬ ರಕ್ಷಣೆಯ ನಾವೆ !** ಹಳೆಯ ಒಡಂಬಡಿಕೆಯ ಕಾಲದಲ್ಲಿ ಭೂಮಿಯಲ್ಲಿ ಮನುಷ್ಯನ ಪಾಪವು ಹೆಚ್ಚಿ ಜಲಪ್ರಳಯವುಂಟಾದಾಗ ನೋಹನು ದೇವರ ಆಜ್ಞೆಯ

ನನ್ನಲ್ಲಿ ಅನೇಕ ಚಿಂತೆಗಳಿರುವಾಗ ನಿನ್ನ ಸಂತೈಸುವಿಕೆಯಿಂದಲೇ ನನ್ನ ಪ್ರಾಣಕ್ಕೆ ಸಂತೋಷವುಂಟಾಗುತ್ತದೆ (ಕೀರ್ತ. 94:19).

ಮೇರೆಗೆ ಮರದ ನಾವೆಯನ್ನು ಕಟ್ಟಿದನು. ಆ ನಾವೆಯಲ್ಲಿ ಮೂರು ಅಂತಸ್ತುಗಳಿದ್ದವು. ಅದು ನಮ್ಮ ಆತ್ಮ, ಪ್ರಾಣ, ಶರೀರವನ್ನು ಸೂಚಿಸುವದು. ಆ ನಾವೆಗೆ ಇದ್ದದ್ದು ಒಂದೇ ಬಾಗಿಲು. ಆ ಬಾಗಿಲ ಮೂಲಕ ಒಳಗೆ ಹೋದವರು ನೋಹನ ಕುಟುಂಬದ ಎಂಟು ಜನರು ಮಾತ್ರ ಹಾಗೂ ಕೆಲವು ಮೃಗಪಕ್ಷಿಗಳು. ಇಂದು ನಮ್ಮ ರಕ್ಷಣೆಗಾಗಿ ಇರುವ ನಾವೆ ಯೇಸುಕ್ರಿಸ್ತನು ಒಬ್ಬನೇ. ಅದರಲ್ಲಿ ಪ್ರವೇಶಿಸುವವರೆಲ್ಲರೂ ರಕ್ಷಿಸಲ್ಪಡುವರು. ಆಶ್ರಯ ಪಡೆದುಕೊಳ್ಳುವರು. ನೋಹನ ನಾವೆಯ ಹೊರಗೆ ಇದ್ದವರು ಜಲಪ್ರಳಯದಲ್ಲಿ ನಾಶವಾದಂತೆ, ಕ್ರಿಸ್ತನ ಎರಡನೇ ಬರೋಣದಲ್ಲಿ ಯಾರ್‍ಯಾರು ಕ್ರಿಸ್ತನೆಂಬ ರಕ್ಷಣೆಯ ನಾವೆಯೊಳಗೆ ಆಶ್ರಯ ಹೊಂದಿಲ್ಲವೋ ನಿತ್ಯಜೀವದ ಬಾಧ್ಯತೆಯನ್ನು ಕಳೆದುಕೊಳ್ಳುವರು.

3. **ಒಡಂಬಡಿಕೆಯ ಪೆಟ್ಟಿಗೆಯೊಳಗೆ** :– ಒಂದು ಚಿಕ್ಕ ಆಶ್ರಯಸ್ಥಳವಾಗಿ ಒಡಂಬಡಿಕೆ ಪೆಟ್ಟಿಗೆ ಕಾಣಬಹುದು. ಅದು ಎರಡುವರೆ ಮೊಳ ಉದ್ದ, ಒಂದುವರೆ ಮೊಳ ಅಗಲ, ಒಂದುವರೆ ಮೊಳ ಎತ್ತರವಾಗಿತ್ತು. ಆ ಪೆಟ್ಟಿಗೆಯಲ್ಲಿ ಮನ್ನವನ್ನು ಇಟ್ಟ ಪಾತ್ರೆ, ಆರೋನನ ಚಿಗುರಿದ ಕೋಲು, ದಶಾಜ್ಞೆಗಳ ಕಲ್ಲಿನ ಹಲಗೆಗಳು ಇದ್ದವು. ಕರ್ತನೊಂದಿಗೆ ನೀವು ಮಾಡಿಕೊಳ್ಳುವ ಒಡಂಬಡಿಕೆಯಲ್ಲಿ ಒಂದು ಆತ್ಮೀಕ ರಹಸ್ಯವಿರುವದು. ನಮ್ಮ ದೇವರು ಒಡಂಬಡಿಕೆಯ ದೇವರಾಗಿರುವನು. ಆತನು ಸತ್ಯವಂತನು.

ಇಸ್ರಾಯೇಲ್ಯರಿಗೆ ಆಹಾರವಾಗಿ ಕೊಟ್ಟ ಮನ್ನ ದೇವದೂತರ ಆಹಾರವಾಗಿದ್ದರೂ, ಜೇನು ತುಪ್ಪದಂತೆ ಸಿಹಿಯಾಗಿದ್ದರೂ ಮಾರನೆಯ ದಿನಕ್ಕೆ ಅದು ಹುಳು ಬಿದ್ದು ನಾರುತ್ತಿತ್ತು. ಇನ್ನು ಅದನ್ನು ಉಪಯೋಗಿಸಲಾಗದು. ಆದರೆ ಅದೇ ಮನ್ನ ಒಡಂಬಡಿಕೆ ಪೆಟ್ಟಿಗೆಯಲ್ಲಿರುವಾಗ ಕೆಟ್ಟುಹೋಗಲಿಲ್ಲ. ಕಾರಣ ಅದು ಒಡಂಬಡಿಕೆಯೆಂಬ ಆತ್ಮೀಕ ಆಶ್ರಯದೊಳಗೆ ಇತ್ತು. ಇಂದು ನೀವು ಶಿಲುಬೆಯ ರಕ್ತದ ಒಡಂಬಡಿಕೆಯೊಳಗೆ ಬಂದಿರುವಿರಿ. "ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ" (ಮತ್ತಾ. 26:27–28). ಎಂದು ಕ್ರಿಸ್ತನು ಹೇಳಿರುವನಲ್ಲವೇ! ನಮ್ಮ ಈ ಶರೀರ ಮಲಿನವಾದದ್ದು, ವ್ಯಾಧಿಯುಳ್ಳದ್ದು. ಆದರೆ ಕರ್ತನೊಂದಿಗೆ ಶರೀರ ರಕ್ತ ಒಡಂಬಡಿಕೆ ಮಾಡಿಕೊಂಡಿರುವಾಗ, ಕರ್ತನ ಬರೋಣದಲ್ಲಿ ನಾಶವಾಗುವ ಈ ಶರೀರ, ಅಮರತ್ವವನ್ನು ಪಡೆದುಕೊಳ್ಳುವದು. ಆತ್ಮೀಕ ಶರೀರವಾಗಿ ಮಾರ್ಪಡುವದು. ಆದ್ದರಿಂದ ನೀವು ಆತ್ಮೀಕ ಆಶ್ರಯವಾಗಿರುವ ಒಡಂಬಡಿಕೆಯ ಪೆಟ್ಟಿಗೆಯೊಳಗೆ ಇರಬೇಕಾದದ್ದು ಅತ್ಯಂತ ಅಗತ್ಯವಾದದ್ದು.

4. **ಮೇಘದ ನೆರಳಿನಲ್ಲಿ** :– ಅಪೊ. ಪೌಲನು ಕೊರಿಂಥ ಸಭೆಗೆ ಬರೆಯುವಾಗ ಹೀಗೆ ಬರೆಯುತ್ತಾನೆ, "ನಿಮ್ಮ ಪಿತೃಗಳೆಲ್ಲರೂ, ಮೇಘದ ನೆರಳಿನಲ್ಲಿದ್ದರು. ಅವರೆಲ್ಲರೂ ಸಮುದ್ರವನ್ನು ದಾಟಿಹೋದರು. ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ, ಸಮುದ್ರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದರು" (1 ಕೊರಿ. 10:1–2) ಎಂದೂ. ಪಸ್ಕದ ಕುರಿಯ ರಕ್ತದಿಂದ, ಇಸ್ರಾಯೇಲ್ಯರು ಐಗುಪ್ತದ ದಾಸತ್ವದಿಂದ ಬಿಡುಗಡೆಯಾದರು. ಇದು ಪಾಪಕ್ಷಮಾಪಣೆಗೂ ರಕ್ಷಣೆಗೂ ಗುರುತಾಗಿದೆ. ನಂತರ ಅವರು ಕೆಂಪು ಸಮುದ್ರದಲ್ಲಿ ನಡೆದುಹೋದದ್ದು ದೀಕ್ಷಾಸ್ನಾನಕ್ಕೆ ಗುರುತಾಗಿದೆ. ಆ ಕ್ಷಣದಿಂದ ಅವರನ್ನು ಮಾರ್ಗ ನಡೆಸಲು ಮೇಘಸ್ತಂಭ ಬಂದಿತು. ಇದು ರಕ್ಷಿಸಲ್ಪಟ್ಟು ದೀಕ್ಷಾಸ್ನಾನ ಹೊಂದಿದ ದೇವರ ಮಕ್ಕಳನ್ನು ದೇವರಾತ್ಮನು ಮಾರ್ಗದರ್ಶಿಯಾಗಿ ನಡೆಸುವದಕ್ಕೆ ಗುರುತಾಗಿದೆ. ಆ ಮೇಘಸ್ತಂಭವು ಹಗಲಿನಲ್ಲಿ ಉಷ್ಣವೂ, ಇರುಳಿನಲ್ಲಿ ಶೀತವು ಬಾಧಿಸದಂತೆ ಇಸ್ರಾಯೇಲ್ಯರನ್ನು ಆವರಿಸಿಕೊಂಡಿತು. ಅದು ಒಂದು ಆತ್ಮೀಕ ಆಶ್ರಯವಾಗಿದೆ. ಆ ಆಶ್ರಯದೊಳಗೆ ಬಂದಾಗ, ಕರ್ತನು ಒಡಂಬಡಿಕೆ ಮಾಡಿಕೊಂಡು ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ಆತನ ದೃಷ್ಟಿಗೆ ಸರಿಬೀಳುವುದನ್ನು ಮಾಡಿ ಆತನ ಆಜ್ಞೆಗಳಿಗೆ ವಿಧೇಯರಾಗಿದ್ದು ಆತನ ಕಟ್ಟಳೆಗಳನ್ನು ಅನುಸರಿಸಿ ನಡೆದರೆ ನಾನು ಐಗುಪ್ತ್ಯರಿಗೆ ಉಂಟುಮಾಡಿದ ವ್ಯಾಧಿಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವದಿಲ್ಲ. ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು (ವಿಮೋ. 15:26) ಎಂದು ವಾಗ್ದಾನ ಮಾಡಿದನು.

ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ (ಕೀರ್ತ. 34:17).

ನೀವು ಯಾವಾಗಲೂ ಪವಿತ್ರಾತ್ಮನೆಂಬ ಮೇಘದ ಕೆಳಗೆ ಇರಿ. ಅಭಿಷೇಕದೊಳಗೆ ಇರಿ. ಪವಿತ್ರಾತ್ಮನಿಂದ ತುಂಬಿರಿ. ಪ್ರಪಂಚದೊಂದಿಗೆ ಇಜ್ಜೋಡಾಗದೆ ಕರ್ತನಿಗಾಗಿ ಬೇರ್ಪಡಿಸಿದ ಜನಾಂಗವಾಗಿ ಕಾಣಲ್ಪಡಿರಿ.

5. **ಸಭೆಯೊಳಗೆ :–** "ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು" (ಕೀರ್ತ. 133:1) ಎಂದು ದಾವೀದನು ಬರೆಯುತ್ತಾನೆ. ಸಭೆ ಎಂಬುದು ಕರ್ತನ ಕುಟುಂಬ. ಇಲ್ಲಿ ಹಿರಿಯ ಅಣ್ಣನಾದ ಯೇಸುಕ್ರಿಸ್ತನು ಇರುವನು. ಆತನು ಸಭೆಯನ್ನು ತನ್ನ ಸ್ವಂತ ರಕ್ತದಿಂದ ಸಂಪಾದಿಸಿಕೊಂಡಿರುವನು (ಅ.ಕೃ. 20:28).

ಸಭೆ ಎಂಬುದು ವಿಶ್ವಾಸಿಗಳಿಗೆ ಆತ್ಮೀಕ ಆಶ್ರಯ ಸ್ಥಾನವಾಗಿದೆ. ಸಭೆಯ ಐಕ್ಯತೆಯಲ್ಲಿ ಬಲ ಉಂಟು, ಜೀವ ಉಂಟು. "ರಕ್ಷಿಸಲ್ಪಟ್ಟವರನ್ನು ಕರ್ತನು ಅನುದಿನವೂ ಸಭೆಯಲ್ಲಿ ಸೇರಿಸಿದನು" (ಅ.ಕೃ. 2:47). ಸಭೆಯಲ್ಲಿ ವಿಶ್ವಾಸಿಗಳಿಗೆ ರಕ್ಷಣೆ, ಆದರಣೆ ಇರುವಂತೆ, ಕರ್ತನು ಸಭೆಯಲ್ಲಿ ಅಪೋಸ್ತಲರನ್ನೂ, ಕುರುಬರನ್ನೂ, ಸೌವಾರ್ತಿಕರನ್ನೂ, ಪ್ರವಾದಿಗಳನ್ನೂ, ಬೋಧಕರನ್ನೂ ಇಟ್ಟಿರುವನು.

ದೇವಜನರೇ, ದೇವಾಲಯಕ್ಕೆ ಬಂದು ಆರಾಧನೆಯಲ್ಲಿ ಭಾಗವಹಿಸಿರಿ. ಕರ್ತನು ತನ್ನ ರೆಕ್ಕೆಗಳಿಂದ ನಿಮ್ಮನ್ನು ಮರೆಮಾಡಿಕೊಳ್ಳುವನು. "ಆತನ ಮರೆಹೊಕ್ಕವರು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತವಾಗಿರುವರು" (ಕೀರ್ತ. 91:1).

**ಸಂಗ್ರಹ.**

---

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ;
ಆತನು ಸಮಸ್ತವನ್ನೂ ಆಳುತ್ತಾನೆ (ಕೀರ್ತ. 103:19).

# ಸಾಕ್ಷಿಯ ಸ್ವರ

ನಾನು ಈ 11 ಕೆರೀತ್ ಕೂಟಕ್ಕೆ ಬರುವಾಗ ನನ್ನಲ್ಲಿ ಕೈನೋವು ಇತ್ತು, ಹೊಟ್ಟೆ ನೋವಿನಿಂದ ಊಟ ಮಾಡಲಿಕ್ಕೆ ಆಗುತ್ತಿರಲಿಲ್ಲ. ಕರ್ತನು ಈ ಕೂಟದಲ್ಲಿ ನನಗೆ ಸಂಪೂರ್ಣ ಬಿಡುಗಡೆಯನ್ನು ಕೊಟ್ಟು ಆರೋಗ್ಯವನ್ನು ದಯಪಾಲಿಸಿದಕ್ಕಾಗಿ ದೇವರ ನಾಮಕ್ಕೆ ಸ್ತೋತ್ರವನ್ನು ಸಲ್ಲಿಸುತ್ತೇನೆ. **"ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು"** (ವಿಮೋ. 15:26).

**ಸಹೋ॥ ತಂಗಮ್ಮ,** ಮಂಗಳೂರು.

ನಾನು ಐ.ಬಿ.ಎಸ್ ಅನ್ನುವ ರೋಗದಿಂದ ಬಳಲುತ್ತಿದ್ದೆ, 11ನೇ ಕೆರೀತ್ ಕೂಟಕ್ಕೆ ಬಂದ ನಂತರ ಒಂದು ದಿನವೂ ನಾನು ಮಾತ್ರೆಯನ್ನು ತಿನ್ನುತ್ತಿರಲಿಲ್ಲ ಆದರೆ ನನಗೆ ಯಾವ ಸಮಸ್ಯೆ ಉಂಟಾಗಲಿಲ್ಲ, ಕರ್ತನು ಈ ಕೂಟದಲ್ಲಿ ಈ ರೋಗದಿಂದ ನನ್ನ ಸಂಪೂರ್ಣ ಬಿಡುಗಡೆ ಮಾಡಿದ್ದಕ್ಕಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸುತ್ತೇನೆ. **"ಮರಣಕರವ್ಯಾಧಿಯಿಂದಲೂ ತಪ್ಪಿಸುವವನು ಆತನೇ"** (ಕೀರ್ತ. 91:3).

**ಸಹೋ॥ ರವಿ,** ಬೆಂಗಳೂರು.

ನಾನು ಈ ಕೂಟಕ್ಕೆ ಬರುವಾಗ ಕುಟುಂಬದಲ್ಲಿ ಅನೇಕ ಸಮಸ್ಯೆಯಿತ್ತು ದೇವರು ಇದರಿಂದ ಬಿಡುಗಡೆ ಕೊಟ್ಟರು ಹಾಗೂ ಕೈ ಕಾಲು & ಶರೀರದಲ್ಲಿ ನೋವು ಇತ್ತು ಇದರಿಂದ ಕರ್ತನು ಸಂಪೂರ್ಣ ಸ್ವಸ್ಥತೆಯನ್ನು ಕೊಟ್ಟಿದ್ದಾರೆ ಆತನ ಪರಿಶುದ್ಧವಾದ ನಾಮಕ್ಕೆ ಸ್ತೋತ್ರ. **"ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು"** (1 ಪೇತ್ರ. 2:24).

**ಸಹೋ॥ ಶಿವಮಣಿ,** ಚಿಕ್ಕಮಂಗಳೂರು.

ನನಗೆ ಇಲ್ಲಿ ಬಂದ ನಂತರ ತುಂಬಾ ಸಂತೋಷವಾಯಿತು ಹಾಗೂ ಕಾಲು, ಕೈ, ಸೊಂಟ ನೋವು, ಶರೀರದಲ್ಲಿ ಊದುವಿಕೆ ಇತ್ತು ಇದರಿಂದ ಕರ್ತನು ಈ ಕೂಟದಲ್ಲಿ ಸಂಪೂರ್ಣ ಬಿಡುಗಡೆಯನ್ನು ಕೊಟ್ಟು ಆರೋಗ್ಯವನ್ನು ದಯಪಾಲಿಸಿದ್ದಾನೆ. ಕರ್ತನ ನಾಮಕ್ಕೆ ಸ್ತೋತ್ರವಾಗಲಿ. **"ಸಮಸ್ತ ರೋಗಗಳನ್ನು ವಾಸಿಮಾಡುವವನೂ"** (ಕೀರ್ತ. 103:3).

**ಸಹೋ॥ ಗೌರಮ್ಮ ,** ಚಿಕ್ಕಮಂಗಳೂರು.

ನಾನು ಈ 11ನೇ ಕೆರೀತ್ ಕೂಟಕ್ಕೆ ಭಾರದೊಂದಿಗೆ, ರೋಗದೊಂದಿಗೆ ಕಣ್ಣೀರಿನಿಂದ ಒಂಟಿಗಳಾಗಿ ಬಂದಿದೆ ಕರ್ತನು ಈ ಕೂಟದಲ್ಲಿ ನನ್ನ ಜೀವಿತದಲ್ಲಿದ್ದ ಭಾರದಿಂದ, ರೋಗದಿಂದ ಬಿಡುಗಡೆಯನ್ನು ಕೊಟ್ಟು ನನ್ನ ಒಂಟಿತನವನ್ನು ದೂರಮಾಡಿದನು ಹಾಗೂ ದೇವರು ನನ್ನ ಜೀವಿತದಲ್ಲಿಟ್ಟಿರುವ ಯೋಜನೆಯನ್ನು, ಪವಿತ್ರಾತ್ಮನ ಕಾರ್ಯಗಳನ್ನು ಕುರಿತು ತಿಳಿದುಕೊಳ್ಳುವುದಕ್ಕೆ ಕರ್ತನು ಸಹಾಯ ಮಾಡಿದನು. ದೇವರ ನಾಮಕ್ಕೆ ಸ್ತೋತ್ರವಾಗಲಿ. **"ಮುರಿದ ಮನಸ್ಸುಳ್ಳವರನ್ನು ವಾಸಿಮಾಡುತ್ತಾನೆ; ಅವರ ಗಾಯಗಳನ್ನು ಕಟ್ಟುತ್ತಾನೆ"** (ಕೀರ್ತ. 147:3).

**ವಿಜಯಲಕ್ಷ್ಮೀ,** ಜಾವಳಿ.

ಯೆಹೋವನೇ, ಜನಾಂಗಗಳಲ್ಲಿ ನಿನ್ನನ್ನು ಸ್ತುತಿಸುವೆನು;
ಸರ್ವದೇಶದವರೊಳಗೆ ನಿನ್ನನ್ನು ಕೊಂಡಾಡುವೆನು (ಕೀರ್ತ. 108:3).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ದೇವರು ನನ್ನ ಬಲವಾದ ಕೋಟೆಯಾಗಿದ್ದಾನೆ; ಆತನು ನನ್ನ ಮಾರ್ಗವನ್ನು ಸರಾಗಮಾಡುತ್ತಾನೆ (2 ಸಮು. 22:33).

# ಮಹಿಳೆಯರ ಸ್ವರ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಪರಿಶುದ್ಧಾತ್ಮನು ನಮ್ಮನ್ನು ತಿದ್ದುವಾಗ, ಮಾರ್ಗದರ್ಶನ ಮಾಡುವಾಗ ನಾವು ಪರಿಪೂರ್ಣವಾಗಿ ಆತನ ಆಳ್ವಿಕೆಗೆ ಒಪ್ಪಿಸಿ ಕೊಡುವುದಾದರೆ ಅನುಗ್ರಹಿಸಲ್ಪಟ್ಟ ಭೌತಿಕ ಹಾಗೂ ಆತ್ಮೀಕ ಜೀವಿತವನ್ನು ಜೀವಿಸಬಹುದು. ಒಂದು ವೇಳೆ ನಿನ್ನ ಜೀವಿತದಲ್ಲಿ ಪವಿತ್ರಾತ್ಮನಿಗೆ ವಿರುದ್ಧವಾಗಿ ಯಾವುದೇ ತರವಾದ ಪಾಪಗಳನ್ನು ಮಾಡಿರುವುದಾದರೆ ಈಗಲೇ ಪಶ್ಚಾತ್ತಾಪಪಟ್ಟು ಆತನ ಬಳಿ ಕ್ಷಮೆ ಕೇಳಿ ಆತನಿಗೆ ನಿನ್ನನ್ನೇ ಒಪ್ಪಿಸಿಕೊಡು ಆತನು ನಿನ್ನ ಜೀವಿತದಲ್ಲಿ ಪಾಪದ ನಿಮಿತ್ತವಾಗಿ ಕಳಕೊಂಡ ಎಲ್ಲವನ್ನು ತಿರುಗಿ ಕೊಡಲು ಶಕ್ತನಾಗಿದ್ದಾನೆ. ನಿನ್ನನ್ನು ಪುನರ್‌ಸ್ಥಾಪಿಸಿ ಉಪಯೋಗಿಸಲು ಪರಿಶುದ್ಧಾತ್ಮನು ಇಷ್ಟಪಡುತ್ತಾನೆ, ಒಪ್ಪಿಸಿಕೊಡು.

2) **ಹಿಂಜಾರುವಿಕೆ ಅಂದರೇನು?** (ಯೆಶಾ. 8:5). ಹಿಂದಿರುಗದಂತೆ ಬಿಟ್ಟು ಹೋಗುವದು. ಯೆರೂಸಲೇಮಿನವರು ಎಂದಿಗೂ ಹಿಂದಿರುಗದಂತೆ ಬಿಟ್ಟು ಹೋದದ್ದೇಕೆ? ಮೋಸವನ್ನೇ ಪಟ್ಟಾಗಿ ಹಿಡಿದಿದ್ದಾರೆ.

ಹಿಂದಿರುಗದಂತೆ ಬಿಟ್ಟು ಹೋಗುವುದರ ಅರ್ಥವನ್ನು ನೋಡಿಕೊಳ್ಳೋಣ :–

1. ಆತ್ಮೀಕ ಜೀವಿತದಲ್ಲಿ ಉಷ್ಣತೆ ತಣ್ಣಗಾಗುವದು
2. ಮೊದಲ ಪ್ರೀತಿ ಕಳಕೊಳ್ಳುವುದು
3. ಆತ್ಮೀಕ ಜೀವಿತದಲ್ಲಿ ಅಭಿವೃದ್ಧಿಯಿಲ್ಲದೆ ಲೋಕಕ್ಕೆ ಹಿಂದೆ ಹೋಗುವದು
4. ಜೀವಿತದಲ್ಲಿ ನಂಬಿಕೆಯನ್ನು, ನಿರೀಕ್ಷೆಯನ್ನು ಕಳಕೊಂಡು ಲೌಕಿಕವಾಗಿ ಜೀವಿಸುವುದು
5. ಅನ್ಯೋನ್ಯತೆ ಕಳಕೊಳ್ಳುವುದು
6. ಜೀವಿತದಲ್ಲಿ ಪರಿಶುದ್ಧತೆಯನ್ನು ಕಳಕೊಂಡು ಪಾಪದಲ್ಲಿ ಜೀವಿಸುವುದು
7. ಆತ್ಮೀಕ ಸಂಗತಿಗಳಿಂದ ದೂರ ಸರಿಯುವದು
8. ದೇವರಿಗೆ ಅಧೀನವಲ್ಲದ ಜೀವಿತವನ್ನು ನಡೆಸುವುದು
9. ಒಳ್ಳೆಯ ಮಾರ್ಗ ಬಿಟ್ಟು ತಪ್ಪಾದ ಮಾರ್ಗದಲ್ಲಿ ನಡೆಯುವುದು
10. ಪರಿಶುದ್ಧತೆಗೆ ವಿರುದ್ಧವಾಗಿ ನಿಂತು ಪಾಪವನ್ನು ಸಮರ್ಥಿಸಿಕೊಳ್ಳುವುದು

1). ಆತ್ಮೀಕ ಜೀವಿತದಲ್ಲಿ ಉಷ್ಣತೆ ತಣ್ಣಗಾಗುವದು :– ಆತ್ಮೀಕ ಜೀವಿತದಲ್ಲಿ ಉಷ್ಣತೆ ತಣ್ಣಗಾಗಲು ಕಾರಣಗಳು :– ಎ) ಪ್ರಾರ್ಥನೆ ಇಲ್ಲದ ವಿಶ್ವಾಸಿ ಜೀವಿತ

ಬಿ) ಜೀವಿತದಲ್ಲಿ ಎಲ್ಲಾ ಸಮಸ್ಯೆಗಳಿಂದ ಬಿಡುಗಡೆ ಹೊಂದಿ ಹಾಯಾಗಿರುವ ಜೀವಿತ

ಸಿ) ಸ್ವಾರ್ಥದಿಂದ ತುಂಬಿದ ಜೀವಿತ

ಡಿ) ಆತ್ಮಭಾರ ಇಲ್ಲದಿರುವ ಜೀವಿತ

ಇ) ಶರೀರದ ಅಭಿಲಾಷೆಗಳಿಂದ ತುಂಬಲ್ಪಟ್ಟ ಜೀವಿತ

ಎಫ್) ದೇವರೊಂದಿಗೆ ನಡೆಯದೇ ಲೋಕದ ಜನರೊಂದಿಗೆ ನಡೆಯುವ ಜೀವಿತ

ಜಿ) ಹರಟೆ ಮಾತುಗಳಿಂದ ತುಂಬಿದ ಜೀವಿತ.

1) **ಪ್ರಾರ್ಥನೆ ಇಲ್ಲದ ವಿಶ್ವಾಸಿ ಜೀವಿತ :–** ಅ.ಕೃ. 2:42 ರಲ್ಲಿ ಇವರು ಅಪೋಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು. ಆದಿ ಕ್ರೈಸ್ತ ವಿಶ್ವಾಸಿಗಳ ಜಯದ ಜೀವಿತಕ್ಕೂ ಸಭೆಗಳ ಬೆಳವಣಿಗೆಗೂ ಅವರಲ್ಲಿದ್ದಂಥಹ ಪ್ರಾರ್ಥನಾ ಜೀವಿತವೇ ಮುಖ್ಯ ಕಾರಣವಾಗಿದೆ. ಪ್ರಾರ್ಥನೆಯು ಒಬ್ಬ ಕ್ರೈಸ್ತ ವಿಶ್ವಾಸಿಗೆ ಬಲವಾದ ಅಸ್ತ್ರವಾಗಿದೆ. ಸೈತಾನನು ಒಬ್ಬ ವಿಶ್ವಾಸಿಯು ಸುವಾರ್ತೆ ಸಾರುವುದಕ್ಕಿಂತಲೂ, ಸಾಕ್ಷಿ ಹೇಳುವುದಕ್ಕಿಂತಲೂ ಹೆಚ್ಚಾಗಿ ಪ್ರಾರ್ಥನೆಗೆ ನಡುಗುವವನಾಗಿದ್ದಾನೆ. ಇಂದಿನ ಸಭೆಗಳಲ್ಲಿ ಅನೇಕ ಕ್ರೈಸ್ತ ವಿಶ್ವಾಸಿಗಳು ಪ್ರಾರ್ಥನೆಯನ್ನು ಅಸಡ್ಡೆ ಮಾಡುವವರಾಗಿದ್ದಾರೆ. ಅವರಿಗೆ ಎಲ್ಲಾ ಕೆಲಸ ಕಾರ್ಯಗಳಿಗೆ ಸಮಯವಿರುತ್ತದೆ ಆದರೆ ಪ್ರಾರ್ಥನೆಗೆ ಸಮಯವಿರುವುದಿಲ್ಲ, ಆದ್ದಕಾರಣ ಅನೇಕ ಕ್ರೈಸ್ತ ವಿಶ್ವಾಸಿಗಳು ಇಂದು ಸೋಲಿನ ಜೀವಿತವನ್ನು ನಡೆಸುತ್ತಿದ್ದಾರೆ. ಸೈತಾನನನ್ನು, ಅವನ ಅಕ್ರಮಗಳನ್ನು ಜಯಿಸಲು ಅವರಿಗೆ ಶಕ್ತಿಯಿಲ್ಲ. ಶೋಧನೆಗಳು ಬರುವಾಗ ತತ್ತರಿಸಿ ನಂಬಿಕೆಯಲ್ಲಿ ಬಿದ್ದು ಹೋಗುತ್ತಾರೆ.

ಸತ್ಯವೇದದಲ್ಲಿ ಕರ್ತನಾದ ಯೇಸುಕ್ರಿಸ್ತನು ಅಪೋಸ್ತಲರು ಸುವಾರ್ತೆಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಪ್ರಾರ್ಥನೆಗೆ ಪ್ರೋತ್ಸಾಹ ಕೊಟ್ಟಿರುವುದನ್ನು ಗಮನಿಸಬಹುದು. "ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ. ಮನಸ್ಸು

ದೇವರ ಮಾರ್ಗವು ಯಾವ ದೋಷವೂ ಇಲ್ಲದ್ದು; ಯೆಹೋವನ ವಚನವು ಶುದ್ಧವಾದದ್ದು.
ಆತನು ಆಶ್ರಿತರೆಲ್ಲರಿಗೆ ಗುರಾಣಿಯಾಗಿದ್ದಾನೆ (2 ಸಮು. 22:31).

ಸಿದ್ಧವಾಗಿದೆ ಸರಿ ಆದರೆ ದೇಹಕ್ಕೆ ಬಲ ಸಾಲದು ಎಂದು ಹೇಳಿದನು" (ಮತ್ತಾ. 26:41). "ಬೇಸರಗೊಳ್ಳದೆ ಪ್ರಾರ್ಥನೆ ಮಾಡುತ್ತಿರಬೇಕೆಂದು ಅವರಿಗೆ ಒಂದು ಸಾಮ್ಯ ಹೇಳಿದನು" (ಲೂಕ. 18:1). "ನಿಮ್ಮ ವಿಷಯದಲ್ಲಿ ಎಚ್ಚರಿಕೆಯಾಗಿರಿ ಅತೀ ಭೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯಗಳು ಭಾರವಾಗಿರಲಾಗಿ ಆ ದಿವಸವು ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೇ ಬಂದಿತು ಆ ದಿವಸವು ಭೂನಿವಾಸಿಗಳೆಲ್ಲರ ಮೇಲೆ ಬರುವುದು ಆದರೆ ಬರುವುದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವುದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ ಅಂದನು" (ಲೂಕ. 21:34–36). "ಕ್ರೈಸ್ತರು ನಿರೀಕ್ಷಿಸುವ ಮಹಾಪದವಿಯನ್ನು ನೆನಸಿ ಉಲ್ಲಾಸವಾಗಿರ್ರಿ, ಉಪದ್ರವದಲ್ಲಿ ಸೈರಣೆಯುಳ್ಳವರಾಗಿರಿ, ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ" (ರೋಮ. 12:12). "ಪವಿತ್ರಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರಿ" (ಎಫೆ. 6:18). "ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞಾತಾ ಸ್ತುತಿಯನ್ನು ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ" (ಫಿಲಿ. 4:6). "ಎಡೆಬಿಡದೆ ಪ್ರಾರ್ಥನೆ ಮಾಡಿರಿ" (1 ಥೆಸ. 5:18).

ಅನುದಿನದ ಜೀವಿತದಲ್ಲಿ ಪ್ರಾರ್ಥಿಸಲೇಬೇಕೆಂಬ ಜವಾಬ್ದಾರಿ ನಮಗಿದ್ದರೂ ಅನೇಕರು ಉದಾಸೀನವಾಗಿ ಪ್ರಾರ್ಥನೆಯನ್ನು ಅಸಡ್ಡೆ ಮಾಡುವುದನ್ನು ಅನೇಕ ಕಡೆ ಕಾಣಬಹುದು. ಅನೇಕರ ಜೀವಿತದಲ್ಲಿ ಪ್ರಾರ್ಥನೆಯಿಲ್ಲದೆ ಆತ್ಮೀಕ ಜೀವಿತದಲ್ಲಿ ಹಿಂಜಾರಿದಂಥ ಅನುಭವಕ್ಕೆ ಬರುತ್ತಾರೆ. ನಮ್ಮ ಜೀವಿತದಲ್ಲಿ ಕರ್ತನಾದ ಯೇಸುಕ್ರಿಸ್ತನು ಪ್ರಾರ್ಥನೆಯ ಮೂಲಕ ಅನುಗ್ರಹಿಸುವ ಆಶೀರ್ವಾದಗಳನ್ನು ಧ್ಯಾನಿಸೋಣ

1) ಪುನಸ್ಥಾಪನೆ (ದ್ವಿಗುಣವಾದ ಆಶೀರ್ವಾದಗಳು) (ಯೋಬ. 42:10)
2) ಅನ್ಯ ಜನಾಂಗಗಳು (ಕೀರ್ತ. 2:8)
3) ಪರಲೋಕದ ಬಾಗಿಲು ತೆರೆಯಲ್ಪಡುವದು (ಮತ್ತಾ. 7:7)
4) ಪರಿಶುದ್ಧಾತ್ಮನ ಅಭಿಷೇಕ (ಅ.ಕೃ. 1:14, ಲೂಕ. 11:13).
5) ಬಂಧನದಲ್ಲಿರುವವರಿಗೆ ಬಿಡುಗಡೆ (ಅ.ಕೃ.12:5, 12:1–12).
6) ಪಾಪ ಪರಿಹಾರ (ಕೀರ್ತ. 32:5).
7) ಕಷ್ಟಗಳಿಂದ ಬಿಡುಗಡೆ (ಕೀರ್ತ. 50:15).
8) ಕಷ್ಟಗಳಿಗೆ ಪರಿಹಾರ (ಕೀರ್ತ. 34:6).
9) ದೈವ ಸಮಾಧಾನ (ಫಿಲಿ. 4:6–7).
10) ರೋಗ ಸೌಖ್ಯ (ಯಾಕೋ. 5:16, ಮತ್ತಾ. 8:2).
11) ಮುಖಪ್ರಕಾಶ (ವಿಮೋ. 34:28–29, ಲೂಕ. 9:29, ಅ.ಕೃ. 7:55).
12) ಒಳ್ಳೆಯ ವರಗಳು (ಮತ್ತಾ. 7:11, ಯಾಕೋ. 1:17).
13) ಎಲ್ಲಾ ಭಯಗಳಿಂದ ಬಿಡುಗಡೆ (ಕೀರ್ತ. 34:4)
14) ಬಂಧಿಸಲ್ಪಟ್ಟ ಸ್ಥಳದಿಂದ ಬಿಡುಗಡೆ (ಯೋನ. 2:9).
15) ಸತ್ಯವೇದದ ಸತ್ಯಾರ್ಥಗಳ ಜ್ಞಾನ (ಎಫೆ. 1:17).
16) ಸುಖ ಸಮಾಧಾನ (1 ತಿಮೊ. 2:2).
17) ತಡವಾದರೂ ಉತ್ತರ (ಲೂಕ. 18:1–7).
18) ಆತ್ಮೀಕ ಜ್ಞಾನ (ಯಾಕೋ. 1:5–8, 1 ಅರ. 3:9–10).
19) ಶೋಧನೆಗಳ ಮೇಲೆ ಜಯ (ಮತ್ತಾ. 26:40–41).
20) ಕರ್ತನು ಬರುವಾಗ ಆತನ ಮುಂದೆ ಯೋಗ್ಯ ಸ್ಥಿತಿಯಲ್ಲಿ ನಿಲ್ಲಲು ಅವಕಾಶ (ಲೂಕ. 21:34–36).
21) ಸುವಾರ್ತೆ ಸೇವೆಗೆ ಬಾಗಿಲು ತೆರೆಯಲ್ಪಡುವುದು (ಅ.ಕೃ. 4:29–31).
22) ದೇಶಕ್ಕೆ ಸುಕ್ಷೇಮ (2 ಪೂರ್ವ. 7:14).
23) ಪ್ರಾರ್ಥಿಸಿದ್ದನ್ನು ಹೊಂದಿಕೊಳ್ಳುವ ವಾಗ್ದಾನ (ಮತ್ತಾ.21:22).
24) ಮುಖ್ಯವಾದ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಯಿತು (ಲೂಕ. 6:12).
25) ಪೇತ್ರನು ಶೋಧನೆಯಿಂದ ತಪ್ಪಿಸಿಕೊಂಡನು (ಲೂಕ. 22:31–32, ಲೂಕ. 22:54–62, ಮತ್ತಾ. 26:69–75, ಯೋಹಾ. 21:15–17).

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ಸಿದ್ಧವಾಗಿರು. ನಿನ್ನಲ್ಲಿ ಕೂಡಿಬಂದಿರುವ ಎಲ್ಲಾ ತಂಡಗಳೊಡನೆ ನಿನ್ನನ್ನು ಸಿದ್ಧಮಾಡಿಕೋ;
ನೀನು ಅವುಗಳಿಗೆ ಪಾಲಕನಾಗಿರು (ಯೆಹೆ. ೩೮:7).

**ವಿಶೇಷ ಸೂಚನೆ**

ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **0091–820 2002781, 0091–9902334941, 0091–9964070654, 0091–820 2559712.**

---

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್
## ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**0091 820 2002781, 0091 9902334941**


---




# ನಮ್ಮೊಂದಿಗೆ ಆಚರಿಸಿ



ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ



ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

## ಮಕ್ಕಳ ಸ್ವರ

1) ಇಸ್ರಾಯೇಲಿನ ಮೂರು ಅರಸರುಗಳು ಯಾರು?

2) ನಾವೆಯನ್ನು ನಿರ್ಮಿಸಿದವನು ಯಾರು?

3) ಯೇಸು ಎಲ್ಲಿ ಬೆಳೆದನು?

4) ಯೆರಿಕೋ ಬಳಿಯಲ್ಲಿದ್ದ ಭಿಕ್ಷುಕನ ಹೆಸರೇನು?

5) ಗೊಲ್ಯಾತನು ಯಾವ ಜನಾಂಗದವನು?

6) ಯೋಸೇಫನು ಫರೋಹನಿಗೆ ಎಷ್ಟು ವರ್ಷ ಕಾಲ ಬರಗಾಲ ಬರುತ್ತದೆಂದು ಹೇಳಿದನು?

7) ಯಾಕೋಬನು ಅಣ್ಣನನ್ನು ಏನೆಂದು ಕರೆಯುತ್ತಿದ್ದನು?

8) ನೋಹನು ನಾವೆಯಿಂದ ಹೊರಗೆ ಬಿಟ್ಟ ಎರಡು ಪಕ್ಷಿಗಳು ಯಾವುದು?

9) ಕುಷ್ಠರೋಗಿಯಾಗಿದ್ದ ಸೇನಾಧಿಪತಿಯ ಹೆಸರೇನು?

10) ಬೆಂಕಿಯಿಂದ ನಾಶವಾದ ಪಟ್ಟಣ ಯಾವುದು?

### ಸೆಪ್ಟಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು

1. ನಿರ್ದೋಷವಾಗಿ ನಡೆಯುವ ದರಿದ್ರನು (ಜ್ಞಾನೋ.28:6).
2. ಕಠಿನಹೃದಯನು (ಜ್ಞಾನೋ. 28:14).
3. ದೋಷಗಳನ್ನು ಮುಚ್ಚಿಕೊಳ್ಳುವವನಿಗೆ (ಜ್ಞಾನೋ. 28:13).
4. ಸಿಂಹದಂತೆ (ಜ್ಞಾನೋ. 28:1).
5. ದ್ರಾಕ್ಷಾರಸಕ್ಕಿಂತ (ಪರಮ. 4:10).
6. ಬಿಳುಪು ಕೆಂಪು (ಪರಮ. 5:10).
7. ಲೆಬನೋನಿಗೆ (ಪರಮ. 5:15).
8. ಮರಣದಷ್ಟು (ಪರಮ. 8:6).
9. ಮುದ್ರೆಯನ್ನಾಗಿ (ಪರಮ. 8:6).
10. ಯೆರೂಸಲೇಮಿನ (ಪರಮ. 6:4).

## ಬೇಕಾಗಿದ್ದಾರೆ

- **ಸ್ಟಾಫ್ ನರ್ಸ್ (ಜಿಎನ್‌ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)**
- **ಎಮ್‌ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**0091–9902334941, 0091–820 2002781.**

ಯೆಹೋವನಲ್ಲಿ ಭರವಸವಿಡುವವರು ಚೀಯೋನ್ ಪರ್ವತದ ಹಾಗೆ ಇದ್ದಾರೆ;
ಅದು ಕದಲುವದಿಲ್ಲ, ಸದಾ ಸ್ಥಿರವಾಗಿರುತ್ತದೆ (ಕೀರ್ತ. 125:1).